# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



HAMPI TIMES No.1 Leading Local News Paper
90,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201





ಸಂಪುಟ:02 • ಸಂಚಿಕೆ: 88 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.10.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 88 • PRGI No:KARKAN/2023/88055 • VIJAYANAGARA • 01.10.2024 • Tuesday • Page:04 • Rs:2


## ಮೈಕ್ರೋ ನ್ಯೂಸ್

### ಅ.04, 05 ರಂದು ಪುಸ್ತಕಗಳ ಪ್ರದರ್ಶನ

**ಹಂಪಿ ಟೈಮ್ಸ್ ಬಳ್ಳಾರಿ**
2021ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಹಾಗೂ ಆಯ್ಕೆಯಾಗದ ಪುಸ್ತಕಗಳ ಪ್ರದರ್ಶ >>3

### ಜಿಲ್ಲೆಯ 59 ಗ್ರಾಮ ಆಯ್ಕೆ

**ಹಂಪಿ ಟೈಮ್ಸ್ ಬಳ್ಳಾರಿ**
ಪ್ರಧಾನಮಂತ್ರಿ ಜನಜಾತಿಯ ಉನ್ನತ ಗ್ರಾಮ ಅಭಿಯಾನ ಯೋಜನೆಯಡಿ ಅಭಿವೃದ್ಧಿ ಪಡಿಸಲು ಪಂಗಡ ಜನಾಂಗದವರು ಹೆಚ್ಚಾಗಿರುವ ಬಳ್ಳಾರಿ ಜಿಲ್ಲೆಯ 5 >>4

### ಐಎಎಸ್, ಕೆಎಎಸ್ ತರಬೇತಿಗೆ ಪರೀಕ್ಷೆ ಪ್ರವೇಶ ಪತ್ರಕ್ಕೆ ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿಗೆ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿಗೆ ಆಯ್ಕೆಗಾಗಿ ನಡೆಯಲಿರುವ ಸಾಮಾನ್ಯ >>3

### ಕೃಷಿ ಯಂತ್ರೋಪಕರಣಗಳ ಯೋಜನೆ: ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಕೃಷಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕೃಷಿ ಸಂಸ್ಕರಣ >>4

## ಶ್ರೀ ಹುಲಿಗೆಮ್ಮ ದೇವಸ್ಥಾನದ ಆಸ್ತಿ ಪ್ರಾಧಿಕಾರಕ್ಕೆ ಹಸ್ತಾಂತರ ಚರ್ಚೆ



**ಹಂಪಿ ಟೈಮ್ಸ್ ಕೊಪ್ಪಳ**
ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆಯು ಸೆ.30ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಶ್ರೀಹುಲಿಗೆಮ್ಮ ದೇವಿ ದೇವಾಲಯದ ಸಮಗ್ರ ಅಭಿವೃದ್ಧಿಗಾಗಿ ಸಿದ್ಧಪಡಿಸಿರುವ ಮಹಾನಕ್ಷೆಯ ಕರಡಿನ ಬಗ್ಗೆ ಮೊದಲಿಗೆ ಹೊಸಪೇಟೆಯ ಸೃಷ್ಟಿ ಆರ್ಕಿಟೆಕ್ಟ್‌ನ ಶ್ರೀಪಾದ ಭೂಪಾಳ ಅವರು ಪಿಪಿಟಿ ಮೂಲಕ ಸಭೆಗೆ ಸಮಗ್ರ ಮಾಹಿತಿ ನೀಡಿದರು.

ಇದೆ ವೇಳೆ ಸಚಿವರು ನಕ್ಷೆಯಲ್ಲಿನ ಅಂಶಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿದರು. ನಕ್ಷೆಯಲ್ಲಿ ತಿಳಿಸಿದಂತೆ ಕೆಲವು ಕಾಮಗಾರಿಗಳನ್ನು ಅಳವಡಿಸಿಕೊಂಡು ಮುಂದಿನ ಕ್ರಮ ವಹಿಸುವುದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

**28 ವಿಷಯಗಳ ಚರ್ಚೆ:** ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮಹಾನಕ್ಷೆಯಲ್ಲಿ ಅಳವಡಿಸಿರುವ ಅಂಶಗಳು, ದೇವಸ್ಥಾನದ ಹಳೆಯ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ಕಲ್ಲಿನಿಂದ ಕಟ್ಟಡ ಕಟ್ಟುವ ಕಾಮಗಾರಿ, ದೇವಸ್ಥಾನಕ್ಕೆ ಚಂದ್ರಶಾಲೆ ಮತ್ತು ನಾಲ್ಕು ಗೋಪುರಗಳನ್ನು ನಿರ್ಮಾಣ ಮಾಡುವ ಬಗ್ಗೆ, ದೇವಸ್ಥಾನದ ಪಕ್ಕದಲ್ಲಿರುವ ವಿಜಯನಗರ ಕಾಲುವೆಯನ್ನು ಸ್ಥಳಾಂತರಿಸುವ ಬಗ್ಗೆ, ಅಮ್ಮ ನಿಲಯದ 2ನೇ ಮಹಡಿ ನಿರ್ಮಾಣದ ಕುರಿತು, ಹುಲಿಗಿಯ ಸ್ಮಶಾನದಿಂದ ಶ್ರೀ ಸೋಮಶೇಖರ ದೇವಸ್ಥಾನದವರೆಗೆ ಮತ್ತು ಅಮ್ಮ ನಿಲಯದಿಂದ ನದಿತೀರದವರೆಗೆ ಬೆಳಕಿನ ವ್ಯವಸ್ಥೆ ಮಾಡುವುದು ಮತ್ತು ವಿದ್ಯುತ್ ಪರಿವರ್ತಕಗಳನ್ನು ಅಳವಡಿ ಸುವ ಕಾಮಗಾರಿ ಕುರಿತು, ಘನ-ದ್ರವ ತ್ಯಾಜ್ಯ ಕಸ ವಿಲೇವಾರಿ ಘಟಕ ನಿರ್ಮಾಣ ಮಾಡುವುದು, ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ 2023-24ನೇ ಸಾಲಿನ ಆದಾಯ ಖರ್ಚು ಮತ್ತು 2024-25ನೇ ಸಾಲಿನ ಆಯವ್ಯಯ ಪತ್ರಕ್ಕೆ ಅನುಮೋದನೆ, 2023-24ನೇ ಸಾಲಿನ ಸಾಮಾನ್ಯ ಸಂಗ್ರಹಣಾ ನಿಧಿಯನ್ನು ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಪಾವತಿಸುವ ಕುರಿತು, ಪರಂಪರಾಗತವಾಗಿ ದೇವಸ್ಥಾನದ ವಶದಲ್ಲಿರುವ 19-21 ಗುಂಟೆ ಗಾಂವಠಾಣ ಜಾಗವನ್ನು 25-01-2011ರ ಜಿಲ್ಲಾಧಿಕಾರಿಗಳ ಆದೇಶದಂತೆ ದೇವಾಲಯದ ಹೆಸರಿಗೆ ಖಾತೆ ಮಾಡಿಕೊಡುವ ಬಗ್ಗೆ, 2023-24ನೇ ಸಾಲಿನವರೆಗೆ ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನ ವರ್ತುಲ ಕೊಪ್ಪಳ ಇವರಿಂದ ಲೆಕ್ಕ ತಪಾಸಣೆ ಮಾಡಿಸಿರುವ ಕುರಿತು, ದೇವಸ್ಥಾನದ ವಿವಿಧ ವಾಣಿಜ್ಯ ಮಳಿಗೆಗಳು, ಖಾಲಿ ಸ್ಥಳ ಹಾಗೂ ಇತರೆ ಹಕ್ಕುಗಳನ್ನು ಒಂದು ವರ್ಷದ ಅವಧಿಗೆ ನವೀಕರಿಸಿ ನೀಡುವ ಬಗ್ಗೆ, ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಾಯ್ದೆಯಲ್ಲಿ ನಮೂದಿಸಿರುವಂತೆ ಒಬ್ಬ ಲೆಕ್ಕ ಅಧೀಕ್ಷಕರು ಹಾಗೂ ಒಬ್ಬ ಸಿವಿಲ್ ಎಂಜಿನಿಯರನ್ನು ನಿಯೋಜಿಸುವ ಬಗ್ಗೆ, ದೇವಸ್ಥಾನಕ್ಕೆ ಟಿ.ಶ್ರೀನಿವಾಸ ಅರ್ಚಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ, ವಿಜಯನಗರ ಕಾಲುವೆ ಮುಖಾಂತರ ಶಿವಪುರ ರಸ್ತೆವರೆಗೆ ಕಾಲುವೆಯ ಬಲ ಎಡ ಬದಿಯಲ್ಲಿ 30 ಅಡಿ ಸಂಪರ್ಕ ರಸ್ತೆ ನಿರ್ಮಿಸಲು ಹಾಗೂ ರೈಲ್ವೆ ಗೇಟ್ ಪಕ್ಕದಲ್ಲಿ ಸಿಸಿ ರಸ್ತೆ ಇದ್ದು ನದಿದಂಡೆವರೆಗೆ ಸಂಪರ್ಕ ಕಲ್ಪಿಸಲು ಬೈಪಾಸ್ ರಸ್ತೆ ನಿರ್ಮಿಸಲು ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ, ದೇವಸ್ಥಾನದ ಪ್ರದೇಶಕ್ಕೆ ಹೊಂದಿಕೊಂಡಂತೆ ಉತ್ತರ ದಿಕ್ಕಿನಲ್ಲಿರುವ ಮಾಗಾಣಿ ಜಮೀನು ವಿಸ್ತೀರ್ಣ 17-19 ಗುಂಟೆ ಮತ್ತು ರೈಲ್ವೆ ಹಳಿ ಪಕ್ಕದಲ್ಲಿ ದಕ್ಷಿಣ ದಿಕ್ಕಿನಲ್ಲಿರುವ ವಿಸ್ತೀರ್ಣ 10-20 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಕುರಿತು, ದೇವಸ್ಥಾನದ ಹತ್ತಿರ ಉತ್ತರ ವಾಹಿನಿಯಾಗಿ ಹರಿಯುತ್ತಿರುವ ತುಂಗಭದ್ರಾ ನದಿಗೆ 5 ಅಡಿ ಎತ್ತರದ ಚೆಕ್ ಡ್ಯಾಂ ನಿರ್ಮಿಸುವ ಕುರಿತು, ಹುಲಿಗೆಮ್ಮ ದೇವಿ ದೇವಾಲಯದ ಚಿಕ್ಕ ರಥಕ್ಕೆ ಬೆಳ್ಳಿಯ ಕವಚ ಅಳವಡಿಸುವ ಮತ್ತು ಅಮ್ಮನ ಮೂಲ ಸನ್ನಿಧಿಯಲ್ಲಿರುವ ಮಂಟಪ ಹಾಳಾಗಿದ್ದು ಹೊಸದಾಗಿ ಮಂದಾಸನ >> 4

## ರಸ್ತೆ ಅಪಘಾತ ಗೊಗ್ಗ ಕುಟುಂಬದ ತಾಯಿ ಮಗ ಮೃತ

**ಹಂಪಿ ಟೈಮ್ಸ್ ಹೊಸಪೇಟೆ**





ವೀರಶೈವ ಲಿಂಗಾಯತ ಸಮಾಜದ ಮುಖಂಡರು, ಗೊಗ್ಗ ಕುಟುಂಬದ ಹಿರಿಯರಾದ ಮತ್ತು ಹೊಂಡ ಶೋರೂಂ ಮಾಲೀಕ ಗೊಗ್ಗ ವಿಶ್ವನಾಥ ಅವರ ಮಾತೋಶ್ರೀ ಶ್ರೀಮತಿ ಗೊಗ್ಗ ಜಗನ್ನಾತಮ್ಮ(74), ಮತ್ತು ಅವರ ಅಣ್ಣ ಗೊಗ್ಗ ಸಿದ್ಧಲಿಂಗಯ್ಯ (51) ಇವರು ಸೋಮವಾರ ಮಧ್ಯಾಹ್ನ ಬೆಂಗಳೂರಿನಿಂದ ಹೊಸಪೇಟೆಗೆ ಕಾರಿನಲ್ಲಿ ಆಗಮಿಸುತ್ತಿದ್ದ ವೇಳೆ ಹಿರಿಯೂರು ಬಳಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಮೃತ ಶ್ರೀಮತಿ ಗೊಗ್ಗ ಜಗನ್ನಾತಮ್ಮಗೆ ಇಬ್ಬರು ಪುತ್ರಿಯರು, ಓರ್ವ ಪುತ್ರ ಇದ್ದಾರೆ. ಮೃತ ಗೊಗ್ಗ ಸಿದ್ದಲಿಂಗಯ್ಯ ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಮೃತ ತಾಯಿ-ಮಗನ ಅಂತ್ಯಕ್ರಿಯೆ ಹೊಸಪೇಟೆ ತಾಲೂಕಿನ ಕಾರಿಗನೂರು ಬಳಿ ಇರುವ ಭಾಗ್ಯೋದಯ ವೇ ಬ್ರಿಡ್ಜ್ ಬಳಿ ಇರುವ ತೋಟದಲ್ಲಿ ಮಂಗಳವಾರ ಮಧ್ಯಾಹ್ನ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ಅಗಲಿಕೆಗೆ ವೀರಶೈವ ಲಿಂಗಾಯತ ಸಮಾಜ ಸೇರಿದಂತೆ ಸ್ನೇಹಿತರು, ಹಿತೈಷಿಗಳು ಕಂಬನಿ ಮಿಡಿದಿದ್ದಾರೆ.

## ಈ ಹುಲುಗಪ್ಪ ನಿಧನ



**ಹೊಸಪೇಟೆ:** ನಗರದ ಹೊಸ ಅಮರಾವತಿ ನಿವಾಸಿ ಈ.ಹುಲುಗಪ್ಪ(62) ಭಾನುವಾರ ರಾತ್ರಿ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಸಹೋದರಿ, ಸಹೋದರರು ಇದ್ದಾರೆ. ಚಿತ್ತವಾಡ್ಗಿ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಿತು.

## ಸಾಧನೆಗೆ ವಿಕಲಾಂಗತೆ ಅಡ್ಡಿಯಲ್ಲ

## ಭಾರತದ ಪ್ಯಾರಾ ಶೂಟರ್ ಅವನಿ ಲೆಖರಾ

ಪುಟ 2ರಲ್ಲಿ ಓದಿ

# ದುಡಿಮೆಗಾಗಿ ಅಲ್ಲ ಸೇವೆಗಾಗಿ ವೈದ್ಯರಾಗಬೇಕು

## ಉಚಿತ ಆರೋಗ್ಯ ತಪಾಸಣೆಯೊಂದಿಗೆ ತಾಂಡೂರು ಆಸ್ಪತ್ರೆ ವಾರ್ಷಿಕೋತ್ಸವ ಸಂಭ್ರಮ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಪಟೇಲ್‌ನಗರದಲ್ಲಿರುವ ತಾಂಡೂರು ಆಸ್ಪತ್ರೆಯ ಪ್ರಥಮ ವಾರ್ಷಿಕೋತ್ಸವ ನಿಮಿತ್ತ ಶಸ್ತ್ರ ಚಿಕಿತ್ಸಕ ಡಾ. ಅಮರ್‌ಜೀತ್ ಈ ತಾಂಡೂರು ಮತ್ತು ಚರ್ಮರೋಗ ತಜ್ಞೆ ಡಾ.ಸ್ನೇಹಾ ಅಮರ್‌ಜೀತ್ ತಾಂಡೂರು ಇವರು ಸೋಮವಾರ ತಮ್ಮ ಸುಸಜ್ಜಿತ ಆಸ್ಪತ್ರೆಯಲ್ಲೆ ಉಚಿತ ಆರೋಗ್ಯ ತಪಾಸಣೆ ಮಾಡುವ ಮೂಲಕ ಆಸ್ಪತ್ರೆಯ ವಾರ್ಷಿಕೋತ್ಸವದ ಸಂಭ್ರಮವನ್ನು ಆಚರಿಸಿದರು.
ಬೆಳಿಗ್ಗೆ ಆಸ್ಪತ್ರೆಯಲ್ಲಿ ದೇವರ ವಿಗ್ರಹಕ್ಕೆ ಕುಟುಂಬ ವರ್ಗ ಪೂಜೆ ಸಲ್ಲಿಸಿ, ವೈದ್ಯರಿಗೆ ರೋಗಿಗಳೇ ದೇವರೆಂದು ಭಾವಿಸಿದ ವೈದ್ಯ ದಂಪತಿ, ಆಸ್ಪತ್ರೆಯಲ್ಲೇ ಉಚಿತ ಆರೋಗ್ಯ ತಪಾಸಣೆಯಲ್ಲಿ ತೊಡಗಿಸಿಕೊಂಡರು. ಉಚಿತ ಆರೋಗ್ಯ ತಪಾಸಣೆಗೆ ಹಿಂದಿನ ದಿನವೇ ಅನೇಕರು ಕರೆ ಮಾಡಿ ಹೆಸರು ನೋಂದಾಯಿಸಿದ್ದರು. ಬೆಳಿಗ್ಗೆಯಿಂದಲೇ ರೋಗಿಗಳು ಆಗಮಿಸುತ್ತಿದ್ದರು. ರೋಗಿಗಳ ತಪಾಸಣೆ ನಡೆಸಿ, ಸೂಕ್ತ ಸಲಹೆ, ಚಿಕಿತ್ಸೆ ನೀಡಿದರು. ನಮ್ಮೂರಲ್ಲಿ ಇಂತಹದ್ದೊಂದು ದೊಡ್ಡ ಆಸ್ಪತ್ರೆ ಇದೆ ಎನ್ನುವುದು ಇಲ್ಲಿಗೆ ಬಂದಮೇಲೆ ಗೊತ್ತಾಯಿತು. ಆಸ್ಪತ್ರೆಯ ಒಳಗಿರುವ ಸ್ವಚ್ಛತೆ, ಶಾಂತತೆ ಮತ್ತು ವೈದ್ಯರು ರೋಗಿಗಳೊಂದಿಗೆ ತಾಳ್ಮೆಯಿಂದ ಮಾತನಾಡುವ ಬಗೆ ನಮಗೆ ಇಷ್ಟವಾಯಿತು. ವೈದ್ಯರು ಉತ್ತಮ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ರೋಗಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮೊದಲ ವರ್ಷದಲ್ಲೇ ತಾಂಡೂರು ಆಸ್ಪತ್ರೆಯ ಬಗ್ಗೆ ಹೆಚ್ಚು ಜನರು ತಿಳಿಯಲು ಪತ್ರಿಕೆ ಮಾಧ್ಯಮ ಹೆಚ್ಚು ಸಹಕಾರಿಯಾಗಿದೆ ಎಂದು ಆಸ್ಪತ್ರೆಯ ವೈದ್ಯರಾದ ಡಾ.ಅಮರಜೀತ್ ಈ ತಾಂಡೂರು ಮತ್ತು ಡಾ.ಸ್ನೇಹಾ ಎ ತಾಂಡೂರು **ಹಂಪಿ ಟೈಮ್ಸ್ ಪತ್ರಿಕೆ**ಯೊಂದಿಗೆ ವರ್ಷದ ಅನುಭವ ಹಂಚಿಕೊಂಡರು.


**ವೈದ್ಯಕೀಯ ವೃತ್ತಿ ಪ್ರಾರಂಭದಲ್ಲಿ ಎದುರಾದ ಮುಖ್ಯ ಸವಾಲುಗಳು ಯಾವುವು?**
ಸೌಂದರ್ಯವಾಗಿರಬೇಕೆಂಬ ಹಂಬಲ ಪ್ರತಿಯೊಬ್ಬರದ್ದಾಗಿರುತ್ತದೆ. ಚರ್ಮರೋಗ ಕಾಯಿಲೆ ಎಂಬುದು ನಾನಾ ಕಾರಣಗಳಿಂದ ಬರುತ್ತದೆ. ಚಿಕಿತ್ಸೆಗೆ ಬರುವ ರೋಗಿಗಳಲ್ಲಿ ಇದರ ಬಗ್ಗೆ ಅರಿವಿನ ಕೊರತೆ ಕಂಡಿದ್ದೇನೆ. ರೋಗಿಗಳಿಗೆ ಮನಮುಟ್ಟುವಂತೆ ತಿಳಿ ಹೇಳಿ ಅರ್ಥೈಸುವುದು ಆರಂಭದಲ್ಲಿ ಸವಾಲಾಗಿರುತ್ತದೆ. ಚರ್ಮಕಾಯಿಲೆಯಿಂದ ತೊಂದರೆಗಳನ್ನು ಅನುಭವಿಸುತ್ತಿರುವ ರೋಗಿಗಳು ಸಮರ್ಪಕವಾಗಿ ವೈದ್ಯರ ಬಳಿ ವಿವರಿಸಲು ತಡಕಾಡುತ್ತಾರೆ. ಅಂತಹ ಸಂದರ್ಭದಲ್ಲಿ ತಾಳ್ಮೆಯಿಂದ ಕೇಳಿ ಸೂಕ್ತ ಚಿಕಿತ್ಸೆ ನೀಡುತ್ತೇವೆ.

**ವೈದ್ಯಕೀಯ ವೃತ್ತಿಯಲ್ಲಿ ಪ್ರಮುಖ ಸಾಧನೆ ಯಾವುದು ಎಂದು ನೀವು ಭಾವಿಸುತ್ತೀರಿ?**
ಮಹಿಳೆ ತನ್ನ ಕುಟುಂಬದ ಅಗತ್ಯತೆಗಳನ್ನು ಪೂರೈಸಿ ಮತ್ತು ರೋಗಿಗಳೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳುವುದು ಹರಸಾಹಸವೆನಿಸಿದರೂ, ರೋಗಿಗಳ ಹಿತ ಕಾಯುವುದು ವೈದ್ಯರ ಕರ್ತವ್ಯವಾಗಿದೆ. ಹಾಗಾಗಿ ಮನೆ ಮತ್ತು ಆಸ್ಪತ್ರೆ ಎರಡನ್ನೂ ನನ್ನೆರಡು ಕಣ್ಣುಗಳಾಗಿಸಿಕೊಂಡಿದ್ದೇನೆ. ಕುಟುಂಬದವರ ಸಹಕಾರದಿಂದ ಎರಡನ್ನೂ ನಿಭಾಯಿಸುವ ಶಕ್ತಿ ಮೈಗೂಡಿಸಿಕೊಂಡು ಸೇವೆಯಲ್ಲಿ ತೊಡಗಿದ್ದೇನೆ. ನನ್ನ ನಿರೀಕ್ಷೆಗೂ ಮೀರಿದ ಸಕಲ ಸೌಲಭ್ಯಗಳುಳ್ಳ ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಿಸಿ, ಈ ಭಾಗದ ಜನರಿಗೆ ಸೇವೆ ಮಾಡಲು ಅವಕಾಶ ಕಲ್ಪಿಸಿರುವ ನಮ್ಮ ಮಾವನವರ ದೂರದೃಷ್ಟಿಗೆ ಜನ ಮೆಚ್ಚುಗೆ ವ್ಯಕ್ತಪಡಿಸಿ, ಪ್ರಶಂಸಿಸುತ್ತಿದ್ದಾರೆ.

**ವೈದ್ಯಕೀಯ ಕ್ಷೇತ್ರದಲ್ಲಿ ನಿರಂತರ ಶಿಕ್ಷಣ ಮತ್ತು ಹೊಸದಾಗಿ ಬಂದ ತಂತ್ರಜ್ಞಾನಗಳನ್ನು ಹೇಗೆ ಒಳಗೊಳ್ಳುತ್ತೀರಿ.?**
ನಿರಂತರ ಅಧ್ಯಯನ, ಹೊಸ ತಂತ್ರಜ್ಞಾನಗಳ ಬಳಕೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಕಣ್ಣಿಗೆ ಕಾಣಿಸಿದ ಕೆಲ ಚರ್ಮಕಾಯಿಗಳ ಪತ್ತೆಗೆ ಅಂತರಾಷ್ಟ್ರೀಯ ಮಟ್ಟದ ಸ್ಕಿನ್ ಸೆಥಾಸ್ಕೋಪ್ ಬಳಸುತ್ತೇವೆ.



ಇದರಿಂದ ಮೇಲ್ನೋಟಕ್ಕಿಂತ 15 ಪಟ್ಟು ಹೆಚ್ಚು ರೋಗದ ಗುಣಲಕ್ಷಣಗಳನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಆಧುನಿಕ ತಂತ್ರಜ್ಞಾನದ ಪರಿಕರಗಳು ರೋಗ ಪತ್ತೆಗೆ ಸಹಕಾರಿಯಾಗಿವೆ.



ಡಾ.ಸ್ನೇಹಾ ಎ ತಾಂಡೂರು

**ಒಂದು ವರ್ಷ ವೈದ್ಯಕೀಯ ವೃತ್ತಿಯಲ್ಲಿ ಸಾರ್ಥಕ ಕ್ಷಣ ಯಾವುದು?**
ತಾಂಡೂರು ಆಸ್ಪತ್ರೆಯಲ್ಲಿ ಒಮ್ಮೆ ಚಿಕಿತ್ಸೆ ಪಡೆದ ರೋಗಿಗಳು ಗುಣಮುಖರಾಗಿ ಬೇರೆಯವರನ್ನು, ಆಸ್ಪತ್ರೆಗೆ ಕರೆತಂದು ಪರಿಚಯಿಸಿ ಅವರಿಗೂ ಚಿಕಿತ್ಸೆ ಕೊಡಿಸುತ್ತಿದ್ದಾರೆ. ರೋಗಿಗಗಳು ಗುಣಮುಖರಾದ ನಂತರ ಅವರ ಕಣ್ಣಲ್ಲಿ ಆನಂದ ಕಂಡ ಆ ಕ್ಷಣಗಳೆಲ್ಲವೂ ನಮ್ಮ ಸೇವೆ ಸಾರ್ಥಕ ಎನಿಸುತ್ತದೆ.

**ಯುವ ವೈದ್ಯರಿಗೆ ಯಾವ ಸಲಹೆ ನೀಡಲು ಬಯಸುತ್ತೀರಿ?**
ದುಡ್ಡು ಗಳಿಸಬೇಕೆಂಬ ಆಸೆಯಿಂದ ವೈದ್ಯಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದು ಸರಿಯಲ್ಲ. ಸೇವಾ ಮನೋಭಾವದಿಂದ ವೈದ್ಯಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಆರೋಗ್ಯವಂತೆ ಸಮಾಜ ನಿರ್ಮಿಸುವಲ್ಲಿ ತಮ್ಮದೇ ಆದ ಕೊಡುಗೆ ನೀಡಲು ಯೋಜನೆ ಹೊಂದಿರಬೇಕು. ನೀಟ್ ಬರೆಯೋದೇ ಸಾಧನೆ ಅಲ್ಲ. ರೋಗಿಗಳನ್ನು ಗುಣಮುಖರನ್ನಾಗಿಸಿ, ಅವರ ಕುಟುಂಬದಲ್ಲಿ ಆನಂದದ ಚಿಲುಮೆ ಉಕ್ಕುವಂತೆ ಮಾಡಿ, ವೈದ್ಯರ ಸೇವೆಯ ಮಹತ್ವವನ್ನು ಸಾರುವಂತಾಗಬೇಕು.

**ವೈದ್ಯಕೀಯ ವೃತ್ತಿ ಪ್ರಾರಂಭದಲ್ಲಿ ಎದುರಾದ ಮುಖ್ಯ ಸವಾಲುಗಳು ಯಾವುವು?**
ಬೃಹತ್ ನಗರ ಮುಂಬೈನಲ್ಲಿ ಪ್ರೊಫೆಸರ್ ಆಗಿ ಮತ್ತು ವೈದ್ಯಕೀಯ ಚಿಕಿತ್ಸೆ ಸೇವೆಯಲ್ಲಿ ತೊಡಗಿದ್ದರಿಂದ ರೋಗಿಗಳ ಗುಣಮುಖರಾಗಲು ಪ್ರಮುಖ ಅಂಶಗಳೇನು ಎಂಬುದನ್ನು ತಿಳಿದುಕೊಂಡಿದ್ದೆ. ನನ್ನೊಳಗೆ ಒಂದಿಷ್ಟು ಯೋಜನೆಗಳಿದ್ದವು. ಆಸ್ಪತ್ರೆಯ ವ್ಯವಸ್ಥೆ, ರೋಗಿಯ ಚಿಕಿತ್ಸೆಗೆ ಶಿಷ್ಟಾಚಾರ ಪಾಲನೆ, ಹೊಸ ಶುಶ್ರೂಕಿಯರಿಗೆ ಬೇಕಿರುವ ತರಬೇತಿ, ಶಿಸ್ತು, ಸಮಯ ಪಾಲನೆ, ಸ್ವಚ್ಛತೆ, ರೋಗಿಗಳಿಗೆ ಅವರಿಗಿರುವ ಕಾಯಿಲೆಗಳ ಬಗ್ಗೆ ಅರ್ಥೈಸುವ ನಿಟ್ಟಿನಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದು ಆರಂಭದಲ್ಲಿ ಸವಾಲಾಗಿದ್ದರೂ, ಸವಾಲುಗಳನ್ನು ಮೆಟಿನಿಲ್ಲಲು ಈ ಹಿಂದೆ ಕಾರ್ಯನಿರ್ವಹಿಸಿದ ಅನುಭವಗಳಿಂದಾಗಿ ರೋಗಿಗಳಿಗೆ ಉತ್ತಮ ಸೇವೆ ನೀಡಲು ನನಗೆ ನೆರವಾಯಿತು.

**ವೈದ್ಯಕೀಯ ವೃತ್ತಿಯಲ್ಲಿ ಪ್ರಮುಖ ಸಾರ್ಥಕ ಕ್ಷಣ ಯಾವುದು ಎಂದು ನೀವು ಭಾವಿಸುತ್ತೀರಿ?**
ಮೂಲವ್ಯಾಧಿಯಿಂದ ಬಳಲುವವರ ನೋವು ಹೇಳತೀರದ್ದಾಗಿರುತ್ತದೆ. ಗುದದ್ವಾರದ ಹತ್ತಿರ ಉರಿಯೂತ, ಕಿರಿಕಿರಿ, ನೋವು, ಮಲದ ಸಮಯದಲ್ಲಿ ರಕ್ತಸ್ರಾವ ಸೇರಿದಂತೆ ಇನ್ನಿತರ ನೋವುಗಳನ್ನು ಅನುಭವಿಸುವವರು ಕಡಿಮೆ ಸಮಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ನೋವುರಹಿತ ಲೇಸರ್ ಚಿಕಿತ್ಸೆ ಮೂಲಕ ಶಸ್ತ್ರಚಿಕಿತ್ಸೆ ಮಾಡಿದಾಗ ರೋಗಿಯು ಶೀಘ್ರ ಗುಣಮುಖರಾಗಿ, ನಗುವಿನೊಂದಿಗೆ ನಮ್ಮನ್ನು ಹಾರೈಸಿ ಆಶೀರ್ವದಿಸಿ ಮನೆಗೆ ಮರಳುವ ಕ್ಷಣಗಳೇ ನಮ್ಮ ಸೇವೆಯ ಸಾರ್ಥಕತೆಗೆ ಸಾಕ್ಷಿ ಎಂದು ಭಾವಿಸುತ್ತೇನೆ.

**ವೈದ್ಯಕೀಯ ಕ್ಷೇತ್ರದಲ್ಲಿ ನಿರಂತರ ಶಿಕ್ಷಣ ಮತ್ತು ಹೊಸದಾಗಿ ಬಂದ ತಂತ್ರಜ್ಞಾನಗಳನ್ನು ಹೇಗೆ ಒಳಗೊಳ್ಳುತ್ತೀರಿ.?**
ರೋಗಿಗೆ ಪರಿಣಾಮಕಾರಿ ಚಿಕಿತ್ಸೆ ನೀಡಲು ವೈದ್ಯಕಿಯ ಕ್ಷೇತ್ರದಲ್ಲಿ ನಿರಂತರ ಅಧ್ಯಯನ ಅಗತ್ಯ. ಆಧುನಿಕ ಜೀವನದ ಶೈಲಿಯಲ್ಲಿ ಅನೇಕರು ಒತ್ತಡದ ಬದುಕಿಗೆ ಸಿಲುಕಿದ್ದಾರೆ. ಸಮಯದ ಅಭಾವದ ಜೊತೆಗೆ ಶೀಘ್ರ ಗುಣಮುಖರಾಗಿ ಮತ್ತೆ ಕಾರ್ಯೋನ್ಮುಖರಾಗಲು ಬಯಸುವುದು ಹೆಚ್ಚಾಗಿದೆ. ಹಾಗಾಗಿ ಗುಣಮಟ್ಟದ ಔಷಧಿ, ಆಧುನಿಕ ತಂತ್ರಜ್ಞಾನಗಳ ಬಳಕೆಗೆ ಆದ್ಯತೆ ನೀಡಿ ಬಳಸುತ್ತಿದ್ದೇವೆ. ಬೆಂಗಳೂರಿನಲ್ಲಿ ದೊರೆಯುವ ಚಿಕಿತ್ಸೆಗಳು ಈಗ ಹೊಸಪೇಟೆ ನಗರದಲ್ಲಿ ತಾಂಡೂರು ಆಸ್ಪತ್ರೆಯಿಂದ ಸೇವೆ ನೀಡುತ್ತಿರುವುದು ನಮಗೆ ಹೆಮ್ಮೆ ತಂದಿದೆ. ಜನರಿಗೆ ಆರ್ಥಿಕ ಹೊರೆ ತಗ್ಗುವುದರ ಜೊತೆಗೆ ಬೇಗ ಗುಣಮುಖರಾಗುತ್ತೇವೆ ಎನ್ನುವ ಭಾವ ಜನರಲ್ಲಿ ಬಂದಿರುವುದಕ್ಕೆ ಹೆಮ್ಮೆ ಎನಿಸುತ್ತಿದೆ.

**ಒಂದು ವರ್ಷ ವೈದ್ಯಕೀಯ ವೃತ್ತಿಯಲ್ಲಿ ಸಾರ್ಥಕ ಕ್ಷಣ ಯಾವುದು?**
ಅನೇಕ ಕಡೆ ತೋರಿಸಿದ್ದೇವೆ ಗುಣಮುಖ ಆಗ್ತಿಲ್ಲ ಬರೀ ತೋರಿಸುವುದೇ ಆಗಿದೆ ಎಂದು ಅಳಲು ತೋಡಿಕೊಂಡು ಬರುವ ಅನೇಕ ರೋಗಿಗಳಿಗೆ ಮೊದಲು ಆತ್ಮಸ್ಥೈರ್ಯ



ತುಂಬಿ, ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡುತ್ತೇನೆ. ಪ್ರಾಥಮಿಕ ಚಿಕಿತ್ಸೆಯಲ್ಲೆ ಗುಣಮುಖವಾಗುವ ಖಾತರಿ ದೊರೆತ ನಂತರ ಮೂಲವ್ಯಾಧಿಗೆ ಶಾಶ್ವತ ಪರಿಹಾರಕ್ಕಾಗಿ ನೀವೇ ಶಸ್ತ್ರ ಚಿಕಿತ್ಸೆ ಮಾಡಿ ಎಂದು ಬರುತ್ತಾರೆ. ರೋಗಿಗಳ ಆಶಯದಂತೆ ಚಿಕಿತ್ಸೆ ಮಾಡತ್ತೇನೆ. ಅವರು ಗುಣಮುಖರಾಗಿ ಸಂತೋಷದಿಂದ ಮನೆಗೆ ತೆರಳುವಾಗ ನಮ್ಮನ್ನು ಹಾರೈಸುವ ಕ್ಷಣಗಳೇ ಸಾರ್ಥಕ ಕ್ಷಣಗಳಾಗಿವೆ.

**ಪ್ರಶ್ನೆ: ಯುವ ವೈದ್ಯರಿಗೆ ಯಾವ ಸಲಹೆ ನೀಡಲು ಬಯಸುತ್ತೀರಿ?**
ವೈದ್ಯಕೀಯ ಸೇವೆ ಆರಂಭಿಸುವಾಗ ಕಷ್ಟ ಎಂದು ಭಾವಿಸಬಾರದು. ಹಿರಿಯರ ಮಾರ್ಗದರ್ಶನದೊಂದಿಗೆ ಸೇವಾ ಮನೋಭಾವದಿಂದ ಸೇವಾವೃತ್ತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ವೈದ್ಯರ ಕೊಡುಗೆ ಅಗತ್ಯವಿದೆ ಎಂಬುದನ್ನು ಅರ್ಥೈಸಿಕೊಂಡು ಪ್ರಾಕ್ಟೀಸ್ ಮಾಡಿದಾಗ ಎಲ್ಲಾ ಗೊಂದಲಗಳಿಗೂ ಪರಿಹಾರ ಸಿಗುತ್ತವೆ. ರೋಗಿಯ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು.



ಡಾ.ಅಮರ್‌ಜೀತ್ ಈ ತಾಂಡೂರು

## ಅ. 2ಕ್ಕೆ ತಿಂದಪ್ಪ ಧರಣಿ ಸತ್ಯಾಗ್ರಹ

■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕು ಅಭಿವೃದ್ಧಿಗೆ ವಿವಿಧ 11 ಬೇಡಿಕೆಗಳ ಹಕ್ಕೊತ್ತಾಯಿಸಿ ಬಿಜೆಪಿ ಮಾಜಿ ರಾಷ್ಟ್ರೀಯ ಪರಿಷತ್ ಸದಸ್ಯ ಎಸ್.ತಿಂದಪ್ಪ ಮತ್ತು ಅವರ ಆಪ್ತರು ಅಕ್ಟೋಬರ್ –2 ರಂದು ಧರಣಿ ಸತ್ಯಾಗ್ರಹ ನಡೆಸುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ–2 ರಂದು ಪಟ್ಟಣದ ಗಾಂಧಿ ಪ್ರತಿಮೆ ಮುಂಭಾಗದ ಬೆಳಿಗ್ಗೆ 9 ರಿಂದ ಸಂಜೆ 5 ಘಂಟೆವರೆಗೆ ಧರಣಿ ನಡೆಯುವ ಬಗ್ಗೆ ತಿಸಿರುವರು.

ತಾಲೂಕು ನಿರ್ಮಾಣಗೊಂಡು 6 ವರ್ಷಗಳು ಕಳೆದರೂ ಪೂರ್ಣ ಪ್ರಮಾಣದ ಕಛೇರಿಗಳಿಲ್ಲ ಕೂಡಲೆ ಇಲಾಖೆಯ ಎಲ್ಲಾ ಕಛೇರಿ ಪ್ರಾರಂಭಿಸುವಂತೆ, ಕೊಟ್ಟೂರು ಪಪಂ ಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆರಿಸುವಂತೆ ಮತ್ತು ಇಲ್ಲಿಗೆ ಶಾಶ್ವತ ಸಂತೆ ಮಾರುಕಟ್ಟೆ ನಿರ್ಮಿಸುವಂತೆ ಹಾಗೂ ಕೊಟ್ಟೂರು ಪಟ್ಟಣಕ್ಕೆ ಕೆಎಸ್‌ಆರ್ಟಿಸಿ ಬಸ್ ಘಟಕ ಹಾಗೂ ವಿಶಾಲವಾದ ಬಸ್ ನಿಲ್ದಾಣ ನಿರ್ಮಿಸುವಂತೆ ಸೇರಿ ವಿವಿಧ ಬೇಡಿಕೆಗಳ ಹಕ್ಕೊತ್ತಾಯಿಸಿ ಧರಣಿ ಸತ್ಯಾಗ್ರಹ ನಡೆಸುವ ಬಗ್ಗೆ ತಿಳಿಸಿದ್ದಾರೆ.

ಈ ಎಲ್ಲಾ ಬೇಡಿಕೆಗಳು 2025 ರ ಗಣರಾಜ್ಯೋತ್ಸವದ ಒಳಗಾಗಿ ಈಡೇರದಿದ್ದಲ್ಲಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಸಂಬಂಧಪಟ್ಟವರಿಗೆ ಎಚ್ಚರಿಕೆ ನೀಡಿದ್ದಾರೆ.

## ಅ.14 ರಂದು ನೇರ ಸಂದರ್ಶನ

■ **ಹಂಪಿ ಟೈಮ್ಸ್ ಬಳ್ಳಾರಿ**

ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರಪ್ರತಿನಿಧಿ ಮತ್ತು ಮತ್ತು ಫೀಲ್ಡ್ ಆಫೀಸರ್‌ಗಳ ನೇಮಕಕ್ಕಾಗಿ ಅ.14 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ, ನಗರದ ಕೋಟೆ ಆವರಣದ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರ ಹಾಗೂ ಶೈಕ್ಷಣಿಕ ಪ್ರಮಾಣ ಪತ್ರದ ನಕಲುಗಳೊಂದಿಗೆ ಅಂದು ನಡೆಯಲಿರುವ ನೇರ ಸಂದರ್ಶನಕ್ಕೆ ಹಾಜರಾಗಬಹುದು.

**ಅರ್ಹತೆ:** ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಪ್ರದೇಶದಲ್ಲಿ ವಾಸಿಸುತ್ತಿದ್ದರೆ 10ನೇ ತರಗತಿ ಉತ್ತೀರ್ಣರಾಗಿರಬೇಕು. ಐದು ಸಾವಿರ ಹಾಗೂ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಇತರೆ ಪ್ರದೇಶಗಳಿಗೆ 12ನೇ ತರಗತಿ ಉತ್ತೀರ್ಣರಾಗಿರಬೇಕು. ಬಳ್ಳಾರಿ ಹಾಗೂ ವಿಜಯನಗರ(ಹೊಸಪೇಟೆ) ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸಿಸುವ ವಿಳಾಸ ಪುರಾವೆಯನ್ನು ಹೊಂದಿರಬೇಕು. ವಯೋಮಿತಿ 18 ವರ್ಷ, ಗರಿಷ್ಠ ವಯಸ್ಸಿನ ಮಿತಿ ಇರುವುದಿಲ್ಲ.

**ನೇರಪ್ರತಿನಿಧಿಗಳು:** ನಿರುದ್ಯೋಗಿ ಹಾಗೂ ಸ್ವಯಂ ಉದ್ಯೋಗ ನಿರತ ಯುವಕರು, ಮಾಜಿ ವಿಮಾ ಕಂಪನಿಗಳ ಸಲಹೆಗಾರರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳಿಯ ಕಾರ್ಯಕರ್ತೆಯರು, ಮಾಜಿ ಗ್ರಾಮ ಪಂಚಾಯಿತಿಯ ಸದಸ್ಯರು ಅರ್ಹರಾಗಿರುತ್ತಾರೆ.

**ಫೀಲ್ಡ್‌ಆಫೀಸರ್:** ನಿವೃತ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೌಕರರು, ನಿವೃತ್ತ ಗ್ರಾಮೀಣ ಅಂಚೆ ಸೇವಕರು (ಜಿಡಿಎಸ್) ಅರ್ಹರಾಗಿರುತ್ತಾರೆ. ವಿಮಾ ಉತ್ಪನ್ನಗಳನ್ನು ಮಾರಾಟ ಮಾಡುವ ಅನುಭವ, ಕಂಪ್ಯೂಟರ್ ಜ್ಞಾನ ಅಥವಾ ಸ್ಥಳೀಯ ಪ್ರದೇಶದ ಜ್ಞಾನವಿರಬೇಕು. ಆಯ್ಕೆಯಾದ ಅಭ್ಯರ್ಥಿಗಳು ರೂ.5000/– (ಐದು ಸಾವಿರ ಮಾತ್ರ) ಗಳನ್ನು ರಾಷ್ಟ್ರೀಯ ಉಳಿತಾಯ ಪತ್ರ ಅಥವಾ ಕಿಸಾನ್ ವಿಕಾಸ ಪತ್ರದ ರೂಪದಲ್ಲಿ ಭದ್ರತಾ ಠೇವಣಿ ಇಡಬೇಕಾಗುತ್ತದೆ. ಆಯ್ಕೆಯಾದ ನೇರಪ್ರತಿನಿಧಿ ಮತ್ತು ಫೀಲ್ಡ್‌ಆಫೀಸರ್‌ಗಳಿಗೆ ಅವರು ಮಾಡಿದ ವ್ಯವಹಾರಕ್ಕೆ ತಕ್ಕಂತೆ ಸೂಕ್ತ ಕಮಿಷನ್ ನೀಡಲಾಗುವುದು. ಇದರ ಹೊರತಾಗಿ ಬೇರೆ ಯಾವುದೇ ನಿಗದಿತ ವೇತನ ಇರುವುದಿಲ್ಲ. ಅಭ್ಯರ್ಥಿಗಳು ಬೇರೆ ಯಾವುದೇ ವಿಮಾ ಕಂಪನಿ, ಸಂಸ್ಥೆ, ಸಂಘಗಳ ಏಜೆಂಟ್ ಆಗಿರಬಾರದು.

**ಬೇಕಾದ ದಾಖಲೆ:** ಆಧಾರ್‌ಕಾರ್ಡ್, ಪಾನ್‌ಕಾರ್ಡ್, ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಅಂಕಪಟ್ಟಿ ದಾಖಲೆಗಳನ್ನು ಸಲ್ಲಿಸಬೇಕು. ನೋಂದಣಿಯ ಸಮಯ: ಬೆಳಗ್ಗೆ 10:30 ರಿಂದ 11:30 ರ ವರೆಗೆ. ಹೆಚ್ಚಿನಮಾಹಿತಿಗಾಗಿ ಡೆವಲಪ್‌ಮೆಂಟ್ ಆಫೀಸರ್ ಮಾರುತಿ.ವಿ (ಮೊ.9481694420) ಹಾಗೂ ಅಂಚೆ ಅಧೀಕ್ಷಕರ ಕಾರ್ಯಾಲಯ ಅಥವಾ ದೂ.08392–266768 ಗೆ ಸಂಪರ್ಕಿಸಿ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.**

# ಭಾರತದ ಪ್ಯಾರಾ ಶೂಟರ್ ಅವನಿ ಲೆಖರಾ




ಜನ್ಮ ನೀಡಿದ ತಂದೆಗೆ ಇನ್ನು ಏನು ತಾನೆ ಬೇಕು? ಮಗಳು ಕಾಲು ಕಳೆದುಕೊಂಡರು ತನ್ನ ಇಚ್ಛೆಯಂತೆ ಸಾಧನೆ ಮಾಡಿ ದೇಶಕ್ಕೆ ಕೀರ್ತಿ ತಂದಾಗ ಎಷ್ಟು ಸಂತೋಷವಾಗಬಹುದು ನೀವೇ ಯೋಚಿಸಿ! ನನ್ನ ಮಗಳು ಅತ್ಯುತ್ತಮ ಶೂಟರ್ ಅವರು ಕೌಶಲ್ಯ ಅತ್ಯುತ್ತಮವಾಗಿದೆ,ಶ್ರಮ ಸಾರ್ಥಕವಾಗಿದೆ ಅವರು ಪದಕವನ್ನು ಗೆಲ್ಲಲು ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ ಎಂದು ಅವರ ತಂದೆ ಪ್ರವೀಣ್ ಲೇಖರಾ ಪತ್ರಿಕಾ ಸಂದರ್ಶನದಲ್ಲಿ ತಮ್ಮ ಮಗಳ ಬಗ್ಗೆ ಹೆಮ್ಮೆಯಿಂದ ನುಡಿಯುತ್ತಾರೆ ಹೌದು ನಾನೀಗ ಹೇಳೋ ಹೊರಟಿರುವುದು ಪ್ಯಾರಾ ಅಥ್ಲೀಟ್ ಒಬ್ಬರ ರೋಚಕ ಕಥೆ.


ಇವರು ನವೆಂಬರ್ 08–2011ರಲ್ಲಿ ರಾಜಸ್ಥಾನದ ಜೈಪುರದಲ್ಲಿ ಜನಿಸಿದ ಮಹಿಳಾ ಭಾರತೀಯ ಪ್ಯಾರಾ ಒಲಿಂಪಿಯನ್,ರಾಜಸ್ಥಾನದ ರೈಫಲ್ ಶೂಟರ್. 024 ಪ್ಯಾರಿಸ್ ಪ್ಯಾರಾ ಒಲಿಂಪಿಕ್ಸ್ 10 ಮೀ ಏರ್ ರೈಫಲ್ ಸ್ಟ್ಯಾಂಡಿಂಗ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ. 2020 ಟೋಕಿಯೊ ಪ್ಯಾರಾ ಒಲಂಪಿಕ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಬ್ಯಾಕ್–ಟು–ಬ್ಯಾಕ್ ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಇತಿಹಾಸವನ್ನು ನಿರ್ಮಿಸಿದ್ದಾರೆ. ಟೋಕಿಯೊದಲ್ಲಿ ನಡೆದ 50 ಮೀಟರ್ ಎಸ್, ಹೆಚ್–1 ಸ್ಪರ್ದೆಯಲ್ಲಿ ಕಂಚಿನ ಪದಕ, ಒಂದೇ ಪ್ಯಾರಾ ಒಲಂಪಿಕ್ ಕ್ರೀಡಾಕೂಟದಲ್ಲಿ ಬಹು ಪದಕಗಳನ್ನು ಗೆದ್ದ ಮೊದಲ ಭಾರತೀಯ ಮಹಿಳೆ.



**ಡಾ.ಸುಧಾಕರ ಜಿ.ಲಕ್ಕವಳ್ಳಿ**
**ಲೇಖಕರು 8747969381**
Scan For Digital Colourful
HAMPI TIMES E-paper

ಇವರು ಪ್ಯಾರಾ ಶೂಟಿಂಗ್ ವಿಶ್ವಕಪ್ ಸ್ಪರ್ಧೆಯಲ್ಲಿ ಭಾಗವಹಿಸಿ ಎರಡು ಬಾರಿ ಚಿನ್ನ ಮತ್ತು ಒಂದು ಬೆಳ್ಳಿ ಪದಕ ಪಡೆದಿರುತ್ತಾರೆ. ಇವರು 11ನೇ ವಯಸ್ಸಿನಲ್ಲಿ ಅಂದರೆ 2012 ರಲ್ಲಿ ಕಾರು ಅಪಘಾತಕ್ಕೆ ಒಳಗಾಗಿ ತಮ್ಮ ಕಾಲುಗಳನ್ನು ಕಳೆದು ಕೊಳ್ಳುತ್ತಾರೆ. ಹೆತ್ತವರು ಮಕ್ಕಳಿಗೆ ಏನೇ ಆದರೂ ಸ್ಪಂದಿಸುವುದು ಅವರ ಕರ್ತವ್ಯ ಮತ್ತು ಜವಾಬ್ದಾರಿ ಇವರ ತಂದೆ ಇವರನ್ನು ಬಿಲ್ಲುಗಾರ್ತಿ ಮಾಡಬೇಕೆಂಬ ಉದ್ದೇಶದಿಂದ ತರಬೇತಿಗೆ ಕಳುಹಿಸುತ್ತಾರೆ ಆದರೆ ಲೇಖರಾ ಅವರು ಶೂಟಿಂಗ್ನಲ್ಲಿ ತಮ್ಮ ಆಸಕ್ತಿಯನ್ನು ಪ್ರಕಟಿಸಿ ತರಬೇತಿ ಪಡೆಯಲು ಆರಂಭಿಸುತ್ತಾರೆ.

ರಾಜಸ್ಥಾನ ವಿಶ್ವವಿದ್ಯಾಲಯದಲ್ಲಿ ಕಾನೂನು ಓದುತ್ತಿದ್ದಾರೆ ಕೇಂದ್ರೀಯ ವಿದ್ಯಾಲಯ (ಜೈಪುರ) ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಕ್ರೀಡೆಯಲ್ಲಿ ಭಾಗವಹಿಸಿ ಪ್ರಾದೇಶಿಕ ಶೂಟಿಂಗ್ ಸ್ಪರ್ಧೆಯಲ್ಲಿ ಮೊದಲ ಚಿನ್ನದ ಪದಕವನ್ನು ಪಡೆದಿರುತ್ತಾರೆ. 2020 ರ ಬೇಸಿಗೆ ಪ್ಯಾರಾಒಲಿಂಪಿಕ್ಸ್‌ನಲ್ಲಿ 10 ಮೀಟರ್ ಏರ್ ರೈಫಲ್ ಸ್ಟ್ಯಾಂಡಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಮತ್ತು 50 ಮೀ, ರೈಫಲ್ 3 ಕಂಚಿನ ಪದಕ, ವಿಶ್ವ ಶೂಟಿಂಗ್ ಪ್ಯಾರಾ ಸ್ಪೋರ್ಟ್ ಶ್ರೇಯಾಂಕಗಳ ಪ್ರಕಾರ ಮಹಿಳಾ 10 ಮೀ,ಏರ್ ರೈಫಲ್ ಎಸ್, ಎಚ್ –1 ನಲ್ಲಿ ಲೆಖರಾ ವಿಶ್ವ ನಂ.01ರ ಶ್ರೇಯಾಂಕ ಪಡೆದಿದ್ದಾರೆ. ರಾಜಸ್ಥಾನ ಸರ್ಕಾರದಿಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ನೇಮಕ ಮಾಡಿ ಇವರನ್ನು ಆರ್ಥಿಕವಾಗಿ ಸಬಲೀಕರಣದ ಜೊತೆಗೆ ಅವರ ಕ್ರೀಡಾ ಸಾಮರ್ಥ್ಯಕ್ಕೆ ಗೌರವ ನೀಡಿದೆ.



ಮಾಜಿ ಒಲಿಂಪಿಕ್ ಚಾಂಪಿಯನ್ ಅಭಿನವ್ ಬಿಂದ್ರಾ ಅವರಿಂದ ಪ್ರೇರಿತರಾಗಿ 2015 ರಲ್ಲಿ ಲೆಖರಾ ಶೂಟಿಂಗ್ ಪ್ರಾರಂಭಿಸಿ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿದ್ದಾರೆ ಸದ್ಯ ಚಂದ್ರಶೇಖರ್ ಅವರು ತರಬೇತಿ ನೀಡುತ್ತಿದ್ದಾರೆ. ಪ್ಯಾರಾ ಒಲಂಪಿಕ್ ನಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಇವರು 2020 ರ ಬೇಸಿಗೆ ಪ್ಯಾರಾ ಒಲಂಪಿಕ್ನಲ್ಲಿ ಭಾರತದ ಮೊದಲ ಚಿನ್ನದ ಪದಕವನ್ನು ಅಂತಿಮ ಸ್ಪರ್ಧೆಯಲ್ಲಿ 249.6 ಅಂಕಗಳಿಸಿ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದು ತಮ್ಮ ಹೆಸರಿನಲ್ಲಿ ವಿಶ್ವದಾಖಲೆ ಬರೆದರು.

3 ಸೆಪ್ಟೆಂಬರ್ 2021 ರಂದು ನಡೆದ ಮಹಿಳೆಯರ 50 ಮೀ ಏರ್ ರೈಫಲ್ ಸ್ಟ್ಯಾಂಡಿಂಗ್ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಪಡೆದು ಪ್ಯಾರಾಒಲಿಂಪಿಕ್ಸ್ ಇತಿಹಾಸದಲ್ಲಿ ಎರಡು ಪದಕಗಳನ್ನು ಗೆದ್ದ ಮೊದಲ ಭಾರತೀಯ ಮಹಿಳಾ ಪ್ಯಾರಾಒಲಿಂಪಿಯನ್ ಎನಿಸಿ ಕೊಂಡಿದ್ದಾರೆ. ಪ್ಯಾರಾಒಲಿಂಪಿಕ್ಸ್ (ಪ್ಯಾರಿಸ್) 2024 ಮಹಿಳೆಯರ 10 ಮೀ, ಏರ್ ರೈಫಲ್ ಸ್ಟ್ಯಾಂಡಿಂಗ್ ಎಸ್,ಎಚ್–1ರಲ್ಲಿ ಚಿನ್ನವನ್ನು ಗೆದ್ದರು. 03 ಪ್ಯಾರಾ ಒಲಂಪಿಕ್ ಪದಕಗಳನ್ನು ಗೆದ್ದ ಮೊದಲ ಭಾರತೀಯ ಮಹಿಳೆ ಲೇಖರಾರವರು.

ಇವರ ಕ್ರೀಡಾ ಸಾಧನೆಗಳಿಗಾಗಿ 2021 ಭಾರತ ಸರ್ಕಾರದಿಂದ ಖೇಲ್ ರತ್ನ, ಜಿ, ಕ್ಯೂ, ಇಂಡಿಯಾ ಇವರಿಂದ 2021ರ–ಯಂಗ್ ಇಂಡಿಯನ್ ಆಫ್ ದಿ ಇಯರ್, ವೋಗ್ ಮ್ಯಾಗಜೀನ್ ರವರಿಂದ(2021) ವೋಗ್ ವುಮೆನ್ ಆಫ್ ದಿ ಇಯರ್, ಅಂತರಾಷ್ಟ್ರೀಯ ಪ್ಯಾರಾ ಒಲಿಂಪಿಕ್ಸ್ ಸಮಿತಿ ಕೊಡ ಮಾಡುವ 2021ರ ಅತ್ಯುತ್ತಮ ಮಹಿಳೆ ಹಾಗೂ ಭಾರತ ಸರ್ಕಾರದಿಂದ 2022 ರ ಪದ್ಮಶ್ರೀ ಪ್ರಶಸ್ತಿ ದೊರೆತಿದೆ ಇದಲ್ಲದೆ ಇನ್ನು ಹತ್ತು ಹಲವಾರು ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದೆ. ತಾಯಿ ನಿನ್ನ ಮುಂದಿನ ಎಲ್ಲಾ ಕ್ರೀಡಾ ಸಾಧನೆಗಳು ಈಡೇರಲಿ ಭಾರತೀಯರೆಲ್ಲರೂ ನಿನಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾರೆ ಒಳಿತಾಗಲಿ.

# ಸಾಧನೆಗೆ ವಿಕಲಾಂಗತೆ ಅಡ್ಡಿಯಲ್ಲ

ತಾನು ಕುಳಿತ ವೀಲ್ ಚೇರ್ ನಿಂದಲೇ ಜಗತ್ತಿನ ಸಮಸ್ತ ವಿಷಯಗಳನ್ನು ಅರಿಯುವ, ಸೈದ್ಧಾಂತಿಕ ಭೌತಶಾಸ್ತ್ರಜ್ಞ, ವಿಶ್ವವಿಜ್ಞಾನಿ ಎಂದು ಹೆಸರಾಗಿದ್ದ ವೈಜ್ಞಾನಿಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವಲ್ಲಿ ಯಶಸ್ವಿಯಾದ ಸ್ಟೀಫನ್ ಹಾಕಿಂಗ್ ತನ್ನ ವಿಕಲಾಂಗತೆಯನ್ನು ಎಂದೂ ದೂರಲಿಲ್ಲ.

ಕಿವಿ ಕೇಳಿಸದ ಮತ್ತು ಕಣ್ಣುಗಳೇ ಇಲ್ಲದ ಅಂಧ ವ್ಯಕ್ತಿ ಹೆಲನ್ ಕೆಲ್ಲರ್,ಎಲ್ಲ ರೀತಿಯ ದೈಹಿಕ ಅಂಗವಿಕಲತೆ ಇದ್ದ ಮನುಷ್ಯರು ಕೂಡ ಸಾಮಾನ್ಯ ಜೀವನವನ್ನು ಜೀವಿಸಬಲ್ಲರು ಎಂದು ಪ್ರತಿಪಾದಿಸಿದ ಹೆಲನ್ ಕೆಲ್ಲರ್ ಅಂಧ ಮತ್ತು ಕಿವುಡ ಮಕ್ಕಳ ಸಮುದಾಯದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸಿದಳು.

ಇನ್ನು ಭಾರತದಲ್ಲಿ ಕಣ್ಣು ಕಾಣಿಸದ ಶ್ರೀಕಾಂತ್ ಬೊಲ್ಲ ಎಂಬ ವ್ಯಕ್ತಿ ಜಗತ್ತೇ ನಿಬ್ಬೆರದಾಗುವಂತಹ ಸಾಧನೆಯನ್ನು ಮಾಡಿ ತನ್ನದೇ ಒಂದು ಉದ್ದಿಮೆಯನ್ನು ಪ್ರಾರಂಭಿಸಿ ವಾರ್ಷಿಕವಾಗಿ ಸುಮಾರು 80 ಕೋಟಿ ವ್ಯವಹಾರವನ್ನು ನಡೆಸಿ ಭಾರತ ದೇಶದ ಶ್ರೇಷ್ಠ ಉದ್ಯಮಿಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರಲ್ಲದೇ ವಿಶ್ವ ಶ್ರೇಷ್ಠ ಉದ್ಯಮಿಗಳಲ್ಲಿ ಕೂಡ ಅವರ ಹೆಸರು ಕೇಳಿ ಬರುತ್ತಿದೆ.



ಅವರದೇ ಸಾಲಿನಲ್ಲಿ ಇನ್ನೊಂದು ಹೆಸರು ದೀಪ್ತಿ ಜೀವನ್ ಜೀ. ಸೂರ್ಯ ಗ್ರಹಣದ ಕಾಲದಲ್ಲಿ ಹುಟ್ಟಿದ ಆಕೆಯ ತಲೆ ತುಸು ಚಿಕ್ಕದಾಗಿದ್ದು ಆಕೆಯ ಮೂಗು ಮತ್ತು ತುಟಿಗಳು ವಿಭಿನ್ನವಾಗಿಯೇ ಇದ್ದವು ಹಳ್ಳಿಯ ಜನ ಗ್ರಹಣದ ಸಮಯದಲ್ಲಿ ಹುಟ್ಟಿದ ಆಕೆಯನ್ನು ಹುಚ್ಚಿ, ಕೋತಿ ಎಂದು ಕರೆದು ಹೀಯಾಳಿಸುತ್ತಿದ್ದರು. ಜನರ ಕೆಟ್ಟ ಮಾತುಗಳಿಂದ ನೋಯುವ ಆಕೆ ಮನೆಗೆ ಬಂದು ಅಳುತ್ತಿದ್ದಳು. ಪುಟ್ಟ ಬಾಲಕಿಯನ್ನು ಸಮಾಧಾನ ಮಾಡಿಸಲು ಆಕೆಯ ಹೆತ್ತವರು ಹರ ಸಾಹಸ ಮಾಡಿ ಆಕೆಯನ್ನು ಅನಾಥಾಶ್ರಮಕ್ಕೆ ಕಳುಹಿಸಲು ಮನಸ್ಸು ಮಾಡಿದರು. ಅಂದು ತನ್ನ ದೈಹಿಕ ಅಂಗವಿಕಲತೆಯಿಂದ ಎಲ್ಲರಿಂದ ಹೀಯಾಳಿಸಲ್ಪಟ್ಟ ಆ ಮಗುವೆ ಪ್ಯಾರಿಸ್ ನ ಪ್ಯಾರಾ ಒಲಂಪಿಕ್ 2024ರಲ್ಲಿ ಚ ಸಾಧನೆ ಮಾಡಿದ ಹುಡುಗಿ ದೀಪ್ತಿ ಜೀವನ್ ಜಿ .

ಪ್ಯಾರಿಸ್ ಪ್ಯಾರಾ ಒಲಿಂಪಿಕ್ 2024ರ ಪಂದ್ಯಾವಳಿಗಳಲ್ಲಿ ಆತ್ಮಬಲ ಮತ್ತು ಛಲ ಇರುವ ವ್ಯಕ್ತಿ ಬದುಕಿನಲ್ಲಿ ಬರುವ ಸಂಘರ್ಷಗಳನ್ನು ಮೆಟ್ಟಿ ನಿಂತು ಜಯ ಸಾಧಿಸುತ್ತಾನೆ ಎಂಬುದಕ್ಕೆ ಸಾಕ್ಷಿಯಾಗಿತ್ತು. ಕೇವಲ 20ರ ಹರೆಯದ ದೀಪ್ತಿ ಜೀವನ್ ಜೀ ಪ್ಯಾರಿಸ್ ನ ಪ್ಯಾರಾ ಒಲಿಂಪಿಕ್ ನಲ್ಲಿ ನಡೆದ ಮಹಿಳೆಯರ 400 ಮೀಟರ್ ಓಟದ ಟಿ20 ಕಾಂಪಿಟೇಶನ್ ನಲ್ಲಿ 55.82 ಸೆಕೆಂಡ್ ಗಳಲ್ಲಿ ಓಡಿ ತನ್ನ 16ನೇ ಪದಕಕ್ಕೆ ಕೊರಳೊಡ್ಡಿದಳು.

ಆಂಧ್ರಪ್ರದೇಶ ರಾಜ್ಯದ ವಾರಂಗಲ್ ಜಿಲ್ಲೆಯ ಕಲ್ಲೇಡ ಎಂಬ ಗ್ರಾಮದಲ್ಲಿ ಜನಿಸಿದ ದೀಪ್ತಿಯ ತಂದೆ ಯದುಗಿರಿ ಮತ್ತು ತಾಯಿ ಧನಲಕ್ಷ್ಮಿ. ಸೂರ್ಯ ಗ್ರಹಣದಂದು ಹುಟ್ಟಿದ ಮಗು ದೈಹಿಕವಾಗಿ ಪುಟ್ಟ ತಲೆಯನ್ನು ಹೊಂದಿದ್ದು ನೋಡಲು ವಿಕಾರವಾಗಿ ತೋರುತ್ತಿತ್ತು. ಕೇವಲ ಅರ್ಧ ಎಕರೆ ಜಮೀನನ್ನು ಹೊಂದಿದ್ದು ಆಕೆಯ ಪಾಲಕರು ಬದುಕಿನ ನಿರ್ವಹಣೆಗಾಗಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಮನೆಯ ಹತ್ತಿರ ಆಟವಾಡಿಕೊಂಡಿರುತ್ತಿದ್ದ ಪುಟ್ಟ ಬಾಲಕಿ ದೀಪ್ತಿಯನ್ನು ಕಂಡು ಆಕೆಯ ವಾರಿಗೆಯ ಮಕ್ಕಳು ಛೇಡಿಸುವುದಲ್ಲದೆ ಆಕೆಯನ್ನು ಹುಚ್ಚಿ, ಕೋತಿ ಎಂದೆಲ್ಲಾ ಕರೆದು ಅವಮಾನ ಮಾಡುತ್ತಿದ್ದರು. ಮಕ್ಕಳೊಂದಿಗೆ ಆಟವಾಡಲು ಬಯಸಿ ಹೋಗಿರುತ್ತಿದ್ದ ಬಾಲಕಿ ಅಳುತ್ತಾ ಮನೆಗೆ ಹಿಂತಿರುಗುತ್ತಿದ್ದಳು. ಮಗಳ ಅಳುವನ್ನು ಕಂಡು ಆಕೆಯ ಪಾಲಕರು ನೊಂದುಕೊಳ್ಳದೆ ಬೇರೇನು ಮಾಡಲು ಸಾಧ್ಯವಾಗುತ್ತಿರಲಿಲ್ಲ.



**ವೀಣಾ ಹೇಮಂತಗೌಡ ಪಾಟೀಲ್**
**ಲೇಖಕರು, ಮುಂಡರಗಿ, ಗದಗ**
Scan For Digital Colourful
HAMPI TIMES E-paper

ಹೀಗೆಯೇ ದಿನಗಳು ಕಳೆದು ಆಕೆ ಶಾಲೆಗೆ ಹೋಗಲಾರಂಭಿಸಿದ ಮೇಲೆ ಆಕೆಯನ್ನು ಗುರುತಿಸಿದ ಓರ್ವ ಶಿಕ್ಷಕರು ಆಕೆಯನ್ನು ಹೈದರಾಬಾದಿನ ವಿಕಲಾಂಗ ಮಕ್ಕಳ ಶಾಲೆಗೆ ಸೇರಿಸಲು ಆಕೆಯ ವೈದ್ಯಕೀಯ ಪರೀಕ್ಷೆ ಮಾಡಿಸಲು ಹೇಳಿದರು. ಅವರ ಮಾತಿನಂತೆ ವೈದ್ಯಕೀಯ ಪರೀಕ್ಷೆಗೆ ಒಳಗಾದ ದೀಪ್ತಿಗೆ ಐಡಿ ಇಂಟಲೆಕ್ಟ್ಯುಯಲ್ ಡಿಸೆಬಿಲಿಟಿ ಇರುವುದು ಪತ್ತೆಯಾಗಿ ವಿಕಲಾಂಗ ಶಾಲೆಯಲ್ಲಿ ಪ್ರವೇಶ ದೊರೆಯಿತು. ತನ್ನಂತೆಯೇ ವಿವಿಧ ತೊಂದರೆಗಳಿಗೆ ಒಳಗಾದ ಮಕ್ಕಳ ನಡುವೆ ದೀಪ್ತಿ ಓದತೊಡಗಿದಳು.

ದೀಪ್ತಿ 9ನೇ ತರಗತಿಯಲ್ಲಿ ಓದುತ್ತಿರುವಾಗ ಆಕೆಯ ಓಟದ ತೀವ್ರತೆಯನ್ನು ಗಮನಿಸಿದ ಆಕೆಯ ಶಾಲೆಯ ದೈಹಿಕ ಶಿಕ್ಷಕರು ರಾಷ್ಟ್ರೀಯ ಅಥ್ಲೆಟಿಕ್ ತಂಡದ ಕೋಚ್ಗಳಲ್ಲಿ ಒಬ್ಬರಾದ ರಮೇಶ್ ಕುಮಾರ್ ಅವರಿಗೆ ಆಕೆಯನ್ನು ಪರಿಚಯಿಸಿದರು. ರಮೇಶ್ ಕುಮಾರ್ ಕೂಡ ಆಕೆಗೆ ಒಳ್ಳೆಯ ತರಬೇತಿಯನ್ನು ನೀಡುವ ಮೂಲಕ ರಾಜ್ಯಮಟ್ಟದ ಹಲವಾರು ಸ್ಪರ್ಧೆಗಳಲ್ಲಿ ಗೆಲ್ಲುವಂತೆ ತಯಾರು ಮಾಡಿದರು.

ಇದೇ ಸಮಯದಲ್ಲಿ ಸ್ಪರ್ಧೆಯೊಂದರಲ್ಲಿ ಆಕೆಯ ಓಟದ ಪ್ರತಿಭೆಯನ್ನು ಗಮನಿಸಿದ ಖ್ಯಾತ ಬ್ಯಾಡ್ಮಿಂಟನ್ ಕ್ರೀಡಾಪಟು ಪುಲ್ಲೇಲ ಗೋಪಿಚಂದ್ ಆಕೆಯನ್ನು ಪ್ರೋತ್ಸಾಹಿಸಿದರು. ನಂತರ ನಡೆದದ್ದು ಇತಿಹಾಸ. ರಾಜ್ಯ ಮತ್ತು ರಾಷ್ಟ್ರೀಯ ಅಥ್ಲೆಟಿಕ್ಸ್ ನ ಓಟದಲ್ಲಿ ಹಲವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿದ ದೀಪ್ತಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮೊದಲ ಬಾರಿ ಜಪಾನ್ ನ ಕೊಬೆಯಲ್ಲಿ ನಡೆದ ವರ್ಲ್ಡ್ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ ಶಿಪ್ ನಲ್ಲಿ ತನ್ನ ಪ್ರಥಮ ಚಿನ್ನದ ಪದಕವನ್ನು ಆಕೆ ಗಳಿಸಿದಳು.

ನಂತರ ಆಕೆ ಹಿಂತಿರುಗಿ ನೋಡಲೇ ಇಲ್ಲ. ಇದೀಗ ಪ್ಯಾರಿಸ್ ನಲ್ಲಿ ನಡೆದ ಪ್ಯಾರಾ ಒಲಂಪಿಕ್ 2024ರಲ್ಲಿ, ಟಿ ಟ್ವೆಂಟಿ 400 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿರುವ ಆಕೆ ಚಿನ್ನದ ಪದಕಕ್ಕೆ ಭಾಜನಳಾಗಿದ್ದಾಳೆ.

ಒಂದೊಮ್ಮೆ ಆಕೆಯ ತೊಂದರೆಯನ್ನು ಗಮನಿಸಿ ಆಕೆಯ ಪಾಲಕರಿಗೆ ಆಕೆಯನ್ನು ತೊರೆದುಬಿಡುವಂತೆ ಸಲಹೆ ನೀಡಿದ ಸಂಬಂಧಿಗಳು ಮತ್ತು ಸ್ನೇಹಿತರು ಇದೀಗ ಆಕೆಯ ಸಾಧನೆಯನ್ನು ಕಂಡು ನಿಬ್ಬೆರಗಾಗಿದ್ದಾರೆ. ಸಾಧನೆಯ ಶಿಖರವನ್ನೇರಲು ಕೇವಲ ಮನಸ್ಸೊಂದಿದ್ದರೆ ಸಾಲದು, ಸಾಧಿಸುವ ತವಕ, ನಿರಂತರ ಪರಿಶ್ರಮ, ಕಠಿಣ ಸಾಧನೆ ಮತ್ತು ಬೆಂಬಲಿಸುವ ವಾತಾವರಣ ಎಂತದ್ದೇ ವಿಕಲಾಂಗರಲ್ಲೂ ಛಲವನ್ನು ಮೂಡಿಸುತ್ತದೆ ಎಂಬುದಕ್ಕೆ ದೀಪ್ತಿಯ ಜೀವನವೇ ಒಂದು ನಿದರ್ಶನ.

ಕೇವಲ 20 ರ ಹರೆಯದ ದೀಪ್ತಿ ಜೀವನ್ ಜಿ ಭವಿಷ್ಯದಲ್ಲಿ ಇನ್ನಷ್ಟು ಪದಕಗಳನ್ನು ತನ್ನ ಮುಡಿಗೇರಿಸಿಕೊಳ್ಳಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧಿಸಿ ತನ್ನಂತಹ ವಿಕಲಾಂಗರಿಗೆ ಸ್ಪೂರ್ತಿ ಮತ್ತು ಉತ್ಸಾಹವನ್ನು ತುಂಬುವ ಚೈತನ್ಯದ ಚಿಲುಮೆಯಾಗಲಿ ಎಂದು ಹಾರೈಸೋಣ.

## ಕವಿ ಮನಸು

### ಪುಟ್ಟಿಯ ಕರು



ಹಸಿರ ಹುಲ್ಲನು ಮೇಯುತ
ಅಂಬಾ ಅಂಬಾವೆಂದು ಕೂಗುತ
ಪುಟ್ಟ ಕರುವೊಂದು ಕುಳಿತಿದೆ
ಕಂದನ ಮನವ ಸೆಳೆದಿದೆ

ಆಟವ ಆಡಲು ಬರುವೆಯಾ
ನನ್ನಯ ಸಂಗಡ ಇರುವೆಯಾ
ಎನ್ನುತ ಪುಟ್ಟಿಯು ಬಳಿಬರಲು
ನೀಡಿತು ಹಣೆಯ ಮುತ್ತಿಕ್ಕಲು

ಅರಳಿತು ಮುಗ್ಧ ಸ್ನೇಹವು
ಎಳೆಯ ಕಂದಮ್ಮಗಳ ಒಡನಾಟವು
ನಿರ್ಮಲ ಪ್ರೀತಿಯ ಅನುಬಂಧವು
ಬೀರುತ ಬಾಂಧವ್ಯದ ಸಂದೇಶವು

ಮಕ್ಕಳ ಮಮತೆಯ ಸೆಲೆ
ಗೋವು ಕರುಗಳಿಗಿರಲಿ ನೆಲೆ
ಗೊಬ್ಬರದಿಂದ ಹಸನಾಗುವುದು ನೆಲ
ಗೋಸಂಪತ್ತೇ ದೇಶದ ಬಲ

– ಚೇತನ ಭಾರ್ಗವ ಬೆಂಗಳೂರು

### ಚೇತನ ನೀಡಿದ ಗಾಯನ

ಸಂಜೆಯ ಹೊತ್ತಿಗೆ ನೇಸರ ಮುಳುಗಲು
ಮಂಜಿನ ಹನಿಗಳು ಕವಿದು
ಅಂಜಿದ ಮನವನು ಸಾಂತ್ವನ ಗೊಳಿಸಿದೆ
ಮಂಜುಳ ನಾದವು ಹರಿದು

ಚಂದಿರ ಬಾನಲಿ ಮೂಡಿದ ಮೆಲ್ಲಗೆ
ಚಂದದ ಹುಣ್ಣಿಮೆ ಬೆಳಕು
ಅಂದದ ಬಾಲೆಯ ಗಾಯನ ನಡೆದಿದೆ
ಸುಂದರ ಘಳಿಗೆಯ ಮೆಲುಕು

ಮಾತಲಿ ಬಣ್ಣಿಸೆ ಪದಗಳು ದೊರೆಯವು
ಚೇತನ ನೀಡಿದೆ ನನಗೆ
ಆತುರದಿಂದಲೆ ಸನಿಹಕೆ ಸಾಗಿದೆ
ಸೋತೆನು ಕಂಠದ ಸಿರಿಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಕಾಂಚನ

ಸುಂದರ ಭಾಸವಿ ಮೋಹಿನಿ ತಾಳಕೆ
ತಕಧಿಮಿ ತಕವೆಂದು ಕುಣಿಯುತಿದೆ
ಎಬುಡತನದಲ್ಲಿ ಕುರುಡು ಕಾಂಚನ
ಮಡುಗಟ್ಟಿ ಕಾಲಲಿ ತುಳಿಯುತ್ತಿದೆ

ನಾನು ನನ್ನದು ಎನ್ನುತಲೇ ಅದು
ಮೈಯ್ಯ ಪರಚಿಕೊಂಡು ಕೂಗುತ್ತಿದೆ
ಮಣ್ಣಲ್ಲಿ ಹೆಣ್ಣಲ್ಲಿ ಹೊನ್ನಲಿ ನಮ್ಮನ್ನೇ
ಮಾಯಾಲೋಕಕ್ಕೆ ತಳ್ಳುತಿದೆ

ಸೊಕ್ಕಲಿ ಹುಬ್ಬುತಾ ಸಿಕ್ಕ ಸಿಕ್ಕಲಿ
ಮೆಲ್ಲನೆ ಕೊಲ್ಲಿತು ನಮ್ಮಯ ಪ್ರಾಣ
ಅತ್ತರು ಸತ್ತರು ಬಿದ್ದರೂ ಸೋತರು
ಕರುಣೆಯೆ ಬರದು ಈ ಜನಕೆ

ದೂತರು ದಾತರು ಯಾತರೂ ಬಲ್ಲದು
ಭೂತ ಪ್ರೇತದ ಲಾಂಛನಕ್ಕೆ
ಹುಚ್ಚಲಿ ಕಿಚ್ಚಲಿ ರಚ್ಚುಗೆ ಬಂದು
ಕತ್ತಿಯೆ ತೂರಿತು ನಾಲಿಗೆಗೆ

ಅಂತಹ ಇಂತಹ ಎಂತಹವನೆಂದರೂ
ಎಳೆಯಿತು ಬಯಲಿಗೆ ಬದುಕನ್ನೇ
ಅಣುಕುತಾ ಇಣುಕುತ ಸೆಣಸುತಾ ಬಂದು
ಕಟು ಮಾತಲ್ಲಿ ಕುಟುಕುತಿದೆ.

ಕೋಪಕೆ ಮೋಹಕೆ ದಾಹಕೆ ನೂಕಿ
ಪಾತಾಳಕೆ ಇಳಿಸಿತು ಈ ಕ್ಷಣಕ್ಕೆ ಹೊಂಚಲಿ
ಸಂಚಲಿ ಅಂಚಿಗೆ ಬಂದು
ಆತಂಕವೇ ತಂದಿತು ಮನೆತನಕೆ

ಸೆಳೆತ ಭಾವದಲಿ ಕೊಳೆತ ಮನಸಿನಲಿ
ಗುಡುಗುತ ಸಿಡುಕುತ ರಕ್ಕಸತನದಲ್ಲಿ
ನೆತ್ತಿಯ ಕಣ್ಣಲ್ಲಿ ಕುತ್ತಿಗೆ ಕೊಯ್ದು
ಮೆತ್ತಗೆ ಮಲಗಿತು ತಾನೇ ಕೊನೆಗೆ.

– ಜಿ. ಯರಿಸ್ವಾಮಿ ಸಂಕ್ಲಾಪುರ

# ಬಾಲ ಹುಳುಗಳ ನಿರ್ಲಕ್ಷ್ಯದಿಂದ ಡೆಂಗ್ಯು ಸೊಳ್ಳೆ ಮರಿಗಳು ಉತ್ಪನ್ನ

## ಡಾ.ಯಲ್ಲಾ ರಮೇಶ್‌ಬಾಬು ಹೇಳಿಕೆ | ಈಡೀಸ್ ಲಾರ್ವಾ ಸಮೀಕ್ಷಾ ಕಾರ್ಯ ಪರಿಶೀಲನೆ



■ ಹಂಪಿ ಟೈಮ್ಸ್ ಬಳ್ಳಾರಿ

ಡ್ರಮ್, ಬ್ಯಾರಲ್, ಸಿಮೆಂಟ್ ತೊಟ್ಟಿ ಸೇರಿದಂತೆ ಯಾವುದೇ ನೀರಿನ ಸಂಗ್ರಹಾರಕಗಳಲ್ಲಿ ಕಂಡುಬರುವ ಬಾಲ ಹುಳುಗಳನ್ನು ನಿರ್ಲಕ್ಷ್ಯ ಮಾಡಬಾರದು, ಅವು ಡೆಂಗ್ಯು ಹರಡುವ ಸೊಳ್ಳೆ ಮರಿಗಳಾಗಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣ ವಿಭಾಗದ ವತಿಯಿಂದ ಸಿದ್ದಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಗ್ರಾಮ ಪಂಚಾಯತ್ ಸಹಕಾರದೊಂದಿಗೆ ಸೋಮವಾರ ದಂದು ಸಿದ್ದಮ್ಮನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಈಡೀಸ್ ಲಾರ್ವಾ ಸಮೀಕ್ಷಾ ಕಾರ್ಯವನ್ನು ಪರಿಶೀಲಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಿಗೂ ನೀರಿನ ಅವಶ್ಯಕತೆ ಇದ್ದು, ಸಾಮಾನ್ಯವಾಗಿ ಕುಡಿಯಲು ಹೊರತುಪಡಿಸಿ ಬಳಕೆಗಾಗಿ ನೀರು ಸಂಗ್ರಹಿಸುವ ಡ್ರಮ್, ಬ್ಯಾರೆಲ್, ಕಲ್ಲಿನದೋಣಿ, ಸಿಮೆಂಟ್ ತೊಟ್ಟಿ ಹಾಗೂ ಬೀಸಾಡಿದ ಟೈರ್, ತಗಡಿನ್ ಟಿನ್, ಹೂವಿನ ಕುಂಡಲು, ಫ್ರೀಜ್ ಹಿಂಭಾಗದ ನೀರಿನಲ್ಲಿ ಕಂಡುಬರುವ ಬಾಲದ ಹುಳುವನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. 7 ದಿನಗಳಲ್ಲಿ ಸೊಳ್ಳೆಯಾಗಿ ನಮ್ಮನ್ನೆ ಕಚ್ಚುವ ಡೆಂಗ್ಯೂ ರೋಗ ಹರಡುವ ಈಡೀಸ್ ಸೊಳ್ಳೆಯ ಮರಿಯಾಗಿರುತ್ತದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರು ತಮ್ಮ ಮನೆಗೆ ಬಳಕೆಗಾಗಿ ನೀರು ತುಂಬುವ ಈ ಎಲ್ಲಾ ಪರಿಕರಗಳನ್ನು ವಾರಕ್ಕೊಮ್ಮೆ ತೊಳೆದು ಒಣಗಿಸಿ, ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚಿ ಹಾಗೂ ಅನಗತ್ಯವಾಗಿ ನೀರು ನಿಲ್ಲುವ ಪರಿಕರಗಳನ್ನು ವಾರಕ್ಕೊಮ್ಮೆ ಪರೀಕ್ಷಿಸಬೇಕು. ಸೊಳ್ಳೆ ಮರಿ ತಡೆಯುವ ಮೂಲಕ ಡೆಂಗ್ಯೂ ರೋಗ ನಿಯಂತ್ರಣಕ್ಕೆ ಸಹಕರಿಸಬೇಕು.

ಪ್ರಸ್ತುತ ದಿನಬಿಟ್ಟು ದಿನ ಮಳೆ ಬರುತ್ತಿದ್ದು, ಬೇಡವಾದವಸ್ತುಗಳಲ್ಲಿನೀರು ಸಂಗ್ರಹಣೆಗೊಂಡು ಡೆಂಗ್ಯೂ ಮತ್ತು ಚಿಕನ್ ಗುನ್ಯಾ ಹರಡುವ ಸೊಳ್ಳೆಗಳ ಉತ್ಪತ್ತಿ ತಡೆಯಬೇಕು. ಜೊತೆಗೆ ಮಲೇರಿಯಾ, ಮೆದುಳು ಜ್ವರ, ಆನೆಕಾಲು ರೋಗ, ಡೆಂಗ್ಯೂ, ಚಿಕನ್ ಗುನ್ಯಾ ಮತ್ತು ಇತ್ತೀಚಿಗೆ ಕಂಡು ಬರುತ್ತಿರುವ ಝೀಕಾ ವೈರಸ್ ರೋಗಗಳನ್ನು ತಡೆಗಟ್ಟಲು ಕುರಿತಂತೆ ವ್ಯಾಪಕವಾಗಿ ಜಾಗೃತಿ ನೀಡಲಾಗುತ್ತಿದ್ದು, ಸಾರ್ವಜನಿಕರು ಕೈ ಜೋಡಿಸಬೇಕು ಎಂದರು.

ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್ ಅಬ್ದುಲ್ಲಾ ಅವರು ಮಾತನಾಡಿ, ಸಾರ್ವಜನಿಕರು ಡೆಂಗ್ಯೂ ಕಾಯಿಲೆಯ ಲಕ್ಷಣಗಳಾದ ಜ್ವರ, ಕಣ್ಣು ಕೆಂಪಾಗುವಿಕೆ, ಕಣ್ಣಿನ ಹಿಂಭಾಗದಲ್ಲಿ ನೋವು, ತಲೆನೋವು, ಗಂಧೆಗಳು, ಕೀಲುಗಳಲ್ಲಿ ನೋವು, ಸ್ನಾಯುಗಳಲ್ಲಿ ನೋವು ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ತಪ್ಪದೇ ಭೇಟಿ ನೀಡಬೇಕು ಎಂದರು.

ಹೆಚ್ಚು ದಿನಗಳ ಕಾಲ ನೀರು ಸಂಗ್ರಹವಿರುವ ಸ್ಥಳಗಳಲ್ಲಿ ಗಪ್ಪಿ ಮತ್ತು ಗಾಂಬೋಷಿಯ ಮೀನುಗಳನ್ನು ಬಿಡಲು ಅವಕಾಶವಿದ್ದು, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಮೀನುಗಳನ್ನು ಪಡೆದು ನೀರಿನ ತಾಣಗಳಲ್ಲಿ ಬಿಡಲು ಹಾಗೂ ಮನೆಯ ಮುಂದೆ ಸ್ವಚ್ಛಗೊಳಿಸಲಾಗದ ನೀರಿನ ಪರಿಕರಗಳಿಗೆ ಟೆಮಿಫಾಸ್ ದ್ರಾವಣವನ್ನು ತಮ್ಮ ಮನೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಭೇಟಿ ನೀಡಿದಾಗ ಹಾಕಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕೀಟಶಾಸ್ತ್ರಜ್ಞನಂದಾ ಕಡಿ, ವೈದ್ಯಾಧಿಕಾರಿ ಡಾ.ದಿವ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಎಪಡಮಾಲಜಿಷ್ಟ್ ಡಾ.ನಿವೇದಿತಾ, ಕಾಲರಾ ನಿಯಂತ್ರಣ ತಂಡದ ತಿಪ್ಪೇಸ್ವಾಮಿ, ಸವಿತಾ, ಆರೋಗ್ಯ ನಿರೀಕ್ಷಣಾಧಿಕಾರಿ ಮರಿಬಸವನಗೌಡ, ಎಮ್‌ಟಿಎಸ್ ಶ್ವೇತಾ, ಬಾಬುರಾವ್ ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮದ ಜಾಗೃತಿ ಮೂಡಿಸಿ

## ಎಡಿಸಿ ಮಹಮ್ಮದ್.ಎನ್ ಝುಬೇರ್ ಹೇಳಿಕೆ | ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಮನ್ವಯ ಸಭೆ



■ ಹಂಪಿ ಟೈಮ್ಸ್ ಬಳ್ಳಾರಿ

ತಂಬಾಕು ಸೇವನೆಯಿಂದ ಯುವ ಸಮುದಾಯ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಈ ಕುರಿತು ಅರಿವು ಮೂಡಿಸಲು ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್ ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಮಟ್ಟದ ಸಮನ್ವಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂಬಾಕು ಸೇವನೆ ಹಾಗೂ ಧೂಮಪಾನ ಆರೋಗ್ಯಕ್ಕೆ ಹಾನಿಕಾರಕವಾಗಿದ್ದು, ಇದರ ಕುರಿತು ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸುವ ಮೂಲಕ ವ್ಯಾಪಕ ಪ್ರಚಾರ ಕೈಗೊಂಡು ಜಾಗೃತಿ ಮೂಡಿಸುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಶಾಲಾ–ಕಾಲೇಜು ಆವರಣದ 100ಮೀ. ಅಂತರದೊಳಗೆ ಧೂಮಪಾನ ಮಾರಾಟ ಮತ್ತು ತಂಬಾಕು ಸೇವನೆ ಸಂಪೂರ್ಣ ನಿಷೇಧಿಸಲಾಗಿದ್ದು, ಮಾರಾಟ ಹಾಗೂ ಬಳಕೆ ಕಂಡು ಬಂದಲ್ಲಿ ಕಾನೂನು ಕ್ರಮ ಜರುಗಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಶಾಲಾ ಕಾಲೇಜು, ಅಂಗಡಿಗಳು, ರೆಸ್ಟೋರೆಂಟ್, ಚಿತ್ರ ಮಂದಿರ, ಸಾರ್ವಜನಿಕ ಸ್ಥಳ ಸೇರಿದಂತೆ ವಿವಿಧೆಡೆ ಅನೀರಿಕ್ಷಿತ ಭೇಟಿ ನಡೆಸಬೇಕು. ಧೂಮಪಾನ ವಲಯಗಳಲ್ಲಿ ಪೋಸ್ಟರ್ ಅಳವಡಿಸದೇ ಇರುವ ಹಾಗೂ ತಂಬಾಕು ನಿಯಂತ್ರಣ ಕೋಶದ ನಿಯಾಮ ವಳಿಗಳನ್ನು ಪಾಲಿಸದೇ ಇದ್ದಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದರು.

ಸಾರ್ವಜನಿಕರು ಹೆಚ್ಚಾಗಿ ಬಸ್ ಪ್ರಯಾಣ ಅವಲಂಬಿಸಿದ್ದು, ತಂಬಾಕು ಸೇವನೆ, ಧೂಮಪಾನದ ದುಷ್ಪರಿಣಾಮ ಕುರಿತು ಬಸ್‌ಗಳಲ್ಲಿ ಮತ್ತು ಬಸ್ ನಿಲ್ದಾಣದಲ್ಲಿ ಪೋಸ್ಟರ್ ಅಂಟಿಸುವ ಮೂಲಕ ಅರಿವು ಮೂಡಿಸಲು ಕೈ ಜೋಡಿಸಿ ಎಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಹೇಳಿದರು.

ಜಿಲ್ಲೆಯಾದ್ಯಂತ ಏಕ ಕಾಲದಲ್ಲಿ ಶಾಲಾ–ಕಾಲೇಜು, ವಿಶ್ವವಿದ್ಯಾಲಯ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ತಂಬಾಕು ಸೇವನೆ ಮತ್ತು ಧೂಮಪಾನದ ದುಷ್ಪರಿಣಾಮ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ವಿನೂತನ ಪ್ರಯೋಗ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ತಂಬಾಕು ನಿಯಂತ್ರಣ ಕುರಿತ ಪೋಸ್ಟರ್‌ಗಳನ್ನು ಪ್ರದರ್ಶಿಸಲಾಯಿತು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಬಸರೆಡ್ಡಿ.ಎನ್., ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮತ್ತಿತರು ಉಪಸ್ಥಿತರಿದ್ದರು.

# ನಗರದಲ್ಲಿ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಿರಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಅಕ್ಟೋಬರ್ 01ರಂದು ಬೆಳಿಗ್ಗೆ 9.30ಕ್ಕೆ ಹೊಸಪೇಟೆ ನಗರಸಭೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ.ನಂದಗಡಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ನಗರಸಭೆಯ ಅಧ್ಯಕ್ಷಾರದ ರೂಪೇಶಕುಮಾರ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಹೊಸಪೇಟೆ ತಾಲೂಕಿನ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ ಹುಲ್ಲೂರ, ಗೌರವಾನ್ವಿತ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್, ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ ಆರ್.ಹೆಚ್., ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ ಜಿ., ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರಾದ ಚೈತ್ರ ಜೆ., ನರಸಭೆಯ ಪೌರಾಯುಕ್ತರಾದ ಚಂದ್ರಪ್ಪ ಸಿ., ವಕೀಲರ ಸಂಘದ ಅಧ್ಯಕ್ಷರಾದ ಕೆ.ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ.ಶ್ರೀನಿವಾಸಮೂರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಶಂಕರ್ ನಾಯ್ಕ್ ಎಲ್.ಎನ್., ತಾಲೂಕು ಆರೋಗ್ಯಧಿಕಾರಿ ಡಾ.ಬಾಸ್ಕರ್, ವಕೀಲರು ಹಾಗೂ ನಗರಸಭೆಯ ಮಾಜಿ ಉಪಾಧ್ಯಕ್ಷರಾದ ಎಲ್.ಎಸ್.ಆನಂದ, ನಿವೃತ್ತ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಎಂ.ರಾಮಪ್ಪ, ನಿವೃತ್ತ ನೌಕರರ ಸಂಘದ ತಾಲೂಕು ಅಧ್ಯಕ್ಷರಾದ ರಾಜಶೇಖರ ಪಾಟೀಲ್, ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಲಕನ್ ಆರ್.ಮಸುಗುಪ್ಪಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಉಪಸ್ಥಿತರಿದ್ದರು.

# ಸಂಚಾರಿ ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಣೆ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನಲ್ಲಿ ಸಂಚಾರಿ ಕುರಿಗಾಹಿಗಳಿಗೆ ಗುರುತಿನ ಚೀಟಿ ನೀಡಲು ಆಸಕ್ತ ಕುರಿಗಾಹಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಸಂಚಾರಿ ಕುರಿಗಾಹಿಗಳು ನಿಗದಿತ ಅರ್ಜಿ ನಮೂನೆಗಳನ್ನು ಸ್ಥಳೀಯ ಪಶು ವೈದ್ಯಾಧಿಕಾರಿಗಳು, ತಾಲ್ಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳ ಕಚೇರಿ ಹಾಗೂ ನಿಗಮದಲ್ಲಿ ನೊಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಿಂದ ಅರ್ಜಿಗಳನ್ನು ಪಡೆದುಕೊಂಡು ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ ಅಕ್ಟೋಬರ್ 25ರ ರೊಳಗಾಗಿ ಆಯಾ ತಾಲ್ಲೂಕಿನ ಮುಖ್ಯ ಪಶು ವೈದ್ಯಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅನುಷ್ಠಾನಾಧಿಕಾರಿಗಳು ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಕೊಪ್ಪಳ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ನರ್ಸಿಂಗ್ ವಿದ್ಯಾರ್ಥಿ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2023–24 ನೇ ಸಾಲಿಗೆ ಬಿ.ಎಸ್ಸಿ ನರ್ಸಿಂಗ್ ಮತ್ತು ಜಿ.ಎನ್.ಎಮ್ ನರ್ಸಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್,ಬೌದ್ಧ, ಸಿಖ್, ಪಾರ್ಸಿ) ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ನವೆಂಬರ್ 10 ಕೊನೆಯ ದಿನವಾಗಿದ್ದು, ಅಭ್ಯರ್ಥಿಗಳು 01. ಅಭ್ಯರ್ಥಿಗಳು ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು. ಅಲ್ಪಸಂಖ್ಯಾತ ಸಮುದಾಯ (ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ್, ಬೌದ್ಧ ಮತ್ತು ಪಾರ್ಸಿ) ಜನಾಂಗಕ್ಕೆ ಸೇರಿದವರಾಗಿರಬೇಕು. ಕೋರ್ಸಿನ ಅವಧಿ–ಪೂರ್ಣಾವಧಿ, ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.2.50 ಲಕ್ಷಗಳನ್ನು ಮೀರಿರಬಾರದು. ವಿದ್ಯಾರ್ಥಿಗಳನ್ನು ಅನುದಾನದ ಲಭ್ಯತೆಯನುಸಾರ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸೀಡಿಂಗ್ ಹಾಗೂ ಎನ್ ಪಿ ಸಿ ಐ ಮ್ಯಾಪಿಂಗ್ ಆಗಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಈ ಯೋಜನೆಯಡಿ ಉತ್ತೇಜನ ಮೊತ್ತವನ್ನು ಪಡೆಯಲು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊಸ (ಪ್ರೆಶ್) ಅರ್ಜಿಗಳನ್ನು ಸಲ್ಲಿಸಬೇಕು.

ಅರ್ಹ ಅಭ್ಯರ್ಥಿಗಳು ನಿಗದಿ ಪಡಿಸಿದ ದಿನಾಂಕದೊಳಗಾಗಿ ವೆಬ್‌ಸೈಟ್ https://sevasindhu.Karnataka.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ದೂ.ಸಂ: 08539–225070, ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಾದ ಗಂಗಾವತಿ ಮೊ.ಸಂ; 9986244408, ಕುಷ್ಟಗಿ ಮೊ.ಸಂ: 8747861392, ಯಲಬುರ್ಗಾ ಮೊ.ಸಂ: 8095191406 ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳಾದ ಸುರೇಶ ಕೋಕರೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಐಎಎಸ್, ಕೆಎಎಸ್ ತರಬೇತಿಗೆ ಪರೀಕ್ಷೆ ಪ್ರವೇಶ ಪತ್ರ ಪಡೆದುಕೊಳ್ಳಲು ಸೂಚನೆ

■ ಹಂಪಿ ಟೈಮ್ಸ್ ಕೊಪ್ಪಳ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿಗೆ ಆಯ್ಕೆಗಾಗಿ ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರ ಪಡೆದುಕೊಳ್ಳುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಕರ್ನಾಟಕ ಹಜ್ ಭವನದಲ್ಲಿ ಐ.ಎ.ಎಸ್., ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 10 ತಿಂಗಳ ವಸತಿ ಸಹಿತ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿದ್ದು, ಈ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅಕ್ಟೋಬರ್ 06 ರಂದು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಲಾಗಿದ್ದು, ಶೀಘ್ರದಲ್ಲಿಯೇ ಪ್ರವೇಶ ಪತ್ರವನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲತಾಣ https://dom.karnataka.gov.in/ ನಲ್ಲಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲಾತಾಣದಲ್ಲಿ ಪ್ರವೇಶ ಪತ್ರ ಪಡೆಯಬೇಕೆಂದು ಎಂದು ಪ್ರಕಟಣೆ ತಿಳಿಸಿದೆ.

# ಅ.04, 05ಕ್ಕೆ ಪುಸ್ತಕಗಳ ಪ್ರದರ್ಶನ

■ ಹಂಪಿ ಟೈಮ್ಸ್ ಬಳ್ಳಾರಿ

2021ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಹಾಗೂ ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವನ್ನು ಅ.04 ಮತ್ತು 05 ರಂದು ಬೆಂಗಳೂರಿನ ಹಂಪಿನಗರದ ಪಶ್ಚಿಮ ವಲಯದ ನಗರ ಕೇಂದ್ರ ಗ್ರಂಥಾಲಯದ ಗ್ರಂಥಾಂಗಣದಲ್ಲಿ ಏರ್ಪಡಿಸಲಾಗಿದೆ.

ಆಯ್ಕೆಯಾದ ಪುಸ್ತಕಗಳ ತಾತ್ಕಾಲಿಕ ಪಟ್ಟಿಯನ್ನು ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಕಚೇರಿಗಳಲ್ಲಿ ಪ್ರದರ್ಶಿಸಲು ಮತ್ತು ಇಲಾಖೆಯ ಅಧಿಕೃತ ವೆಬ್ ಸೈಟ್ dpl karnataka.gov.in ನಲ್ಲಿ ಪ್ರಕಟಿಸಲು ಕ್ರಮ ವಹಿಸಲಾಗುತ್ತದೆ.

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ಆಕ್ಷೇಪಣೆಗಳಿದ್ದಲ್ಲಿ ಅ.09 ಸಂಜೆ 5.30 ರ ಒಳಗಾಗಿ ಅಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇಲ್ಲಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸಬಹುದು.

ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ಕಚೇರಿಗೆ ಸಂಪರ್ಕಿಸಬಹುದು ಎಂದು ಬಳ್ಳಾರಿ ನಗರ ಕೇಂದ್ರ ಗ್ರಂಥಾಲಯ ಮುಖ್ಯ ಗ್ರಂಥಾಲಯಾಧಿಕಾರಿ ತಿಳಿಸಿದ್ದಾರೆ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**01–10–2024 – ಮಂಗಳವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ/ಫಾಲ್ಗುಣಿ |
| ಯೋಗ | : ಶುಕ್ಲ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:19:43 |
| ಸೂರ್ಯಾಸ್ತ | : 18:12:50 |
| ರಾಹು ಕಾಲ | : 15:15–16:44 |
| ಯಮಘಂಡ ಕಾಲ | : 09:18–10:47 |
| ಗುಳಿಕ ಕಾಲ | : 12:16–13:45 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 30–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10633 ಕ್ಯುಸೆಕ್ |
| ಹೊರ ಹರಿವು | 10153 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1618.23 ಅಡಿ |
| ಒಳ ಹರಿವು | 1419 ಕ್ಯುಸೆಕ್ |
| ಹೊರ ಹರಿವು | 9739 ಕ್ಯುಸೆಕ್ |
| ಸಾಮರ್ಥ್ಯ | 56.505 ಟಿಎಂಸಿ |


## CHANGE OF NAME

I, **ARYA MRUTHUNJAYA BADAMI** S/o **Mruthunjaya Badami**, R/o. Main Road, Basaveshwara Bazar, Hagaribommanahalli Town in Hagaribommanahalli Taluk, Vijayanagar Dist. do hereby solemnly affirm and state on oath as follows, That my name is entered in My Aadhar Card (No.6607 8857 5655) as ARYA MRUTHUNJAYA BADAMI S/o Mruthunjaya Badami. But my name is entered in Passport (N1266116) as ARYA BADAMI S/o Mruthunjaya Badami. That said names are one and the same i.e., mine. This affidavit is produce before Passport authority to proove my correct names as **ARYA MRUTHUNJAYA BADAMI** S/o Mruthunjaya Badami. So i request to passport authority to add my name as ARYA MRUTHUNJAYA BADAMI instead of ARYA BADAMI S/o Mruthunjaya Badami.
Vide affidavit sworn before Advocate & Notary P.Chatrappa, dated 13.09.2024 at Hagaribommanahalli.


# ಕೊಟ್ಟೂರು ಬಸ್ ನಿಲ್ದಾಣ ಜಲಾವೃತ್ತ

■ **ಹಂಪಿ ಟೈಮ್ಸ್ ಕೊಟ್ಟೂರು**

ಹಸ್ತಮಳೆ ಭಾನುವಾರ ಮದ್ಯ ರಾತ್ರಿ ಕೊಟ್ಟೂರು ತಾಲೂಕಿನಾದ್ಯಂತ ಉತ್ತಮವಾಗಿ ಸುರಿದಿದ್ದು, ಮಳೆ ನೀರಿನಿಂದ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣ ಸಂಪೂರ್ಣ ಜಲಾವೃತ್ತವಾಗಿತ್ತು.ಇದನ್ನು ಕಂಡ ಪ್ರಯಾಣಿಕರು ಜನ ಪ್ರತಿನಿಧಿಗಳಿಗೆ ಹಾಗೂ ಸಾರಿಗೆ ಇಲಾಖೆಗೆ ಅಧಿಕಾರಿಗಳಿಗೆ ವಾಚಾಮಾಚ ವಾಗಿ ಇಡೀ ಶಾಪ ಹಾಕಿದರು. ಪಟ್ಟಣದಲ್ಲಿನ ಚರಂಡಿ ತ್ಯಾಜ್ಯದಿಂದ,ಮಳೆ ನಿಂತು ಕೆಲ ಘಂಟೆಯ ನಂತರ ಬಸ್ ನಿಲ್ದಾಣದ ಸಂಪೂರ್ಣ ಕೆಸರು ಗದ್ದೆಯಂತೆ ಯಾಗಿ, ಪ್ರಯಾಣಿಕರು



ಕೆಸರಿನಲ್ಲಿ, ಹರ ಸಾಹಸದಿಂದ ಬಸ್ ಏರಿದರು. ಬಸ್ ನಿಲ್ದಾಣ ಸಂಪೂರ್ಣ ತುಂಬಿದ್ದ ಚರಂಡಿ ತ್ಯಾಜ್ಯ,ಪ್ರಯಾಣಿಕರು ನಿಲ್ದಾಣದಲ್ಲಿ ನಿಲ್ಲದಂತೆ ದುರ್ಗಂದ ಭೀರುತ್ತಿತ್ತು, ಇದರ ವಾಸನೆ ಸಹಿಸದ ಸಾರ್ವಜನಿಕರು ನಿಲ್ದಾಣಕ್ಕೆ ಬರಲು ಹಿಂದೇಟು ಹಾಕಿದರು.

3 ಕೋಟಿ.ವೆಚ್ಚದಲ್ಲಿ ಶೀಘ್ರ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಶಾಸಕರು ಕೆ.ನೇಮಿರಾಜ್ ನಾಯ್ಕ್ ಅವರು ಮಹಿಳೆಯರಿಗೆ ಉಚಿತ ಬಸ್ " ಶ್ರೀ ಶಕ್ತಿ ಯೋಜನೆ "ಗೆ ಚಾಲನೆ ನೀಡಿ ಭರವಸೆ ನೀಡಿದ್ದರು. ಇದುವರೆಗೆ ಯಾವುದೇ ಕಾಮಗಾರಿ ನಡೆಯುವ ದೃಶ್ಯ ಬಸ್ ನಿಲ್ದಾಣದಲ್ಲಿ ಇಲ್ಲದಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

# ಶ್ರೀ ಹುಲಿಗೆಮ್ಮ ದೇವಸ್ಥಾನ ಅಭಿವೃದ್ಧಿ ಸಭೆ

**ಮೊದಲ ಪುಟದಿಂದ**

ನಿರ್ಮಾಣ ಮಾಡಿ ಬೆಳ್ಳಿ ಕವಚ ಅಳವಡಿಸುವ ಕಾಮಗಾರಿ ಕುರಿತು, ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸುಸಜ್ಜಿತ ಆಡಳಿತ ಕಚೇರಿಯನ್ನು ನಿರ್ಮಿಸುವ ಕುರಿತು, ಇಲಾಖಾ ಮುಖ್ಯಸ್ಥರು ಹಾಗೂ ಇನ್ನೀತರ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪ್ರಾಧಿಕಾರದ ಕಾರ್ಯದರ್ಶಿಗಳಿಗೆ ಚಲಾಯಿಸಲು ಅಧಿಕಾರ ನೀಡುವ ಬಗ್ಗೆ, ಹುಲಗೆಮ್ಮ ದೇವಿ ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಪ್ರಾಧಿಕಾರದ ನೌಕರರೆಂದು ಪರಿಗಣಿಸುವ ಬಗ್ಗೆ, ಹುಲಿಗೆಮ್ಮ ದೇವಿ ದೇವಾಲಯವು ಹೊಂದಿರುವ ಸ್ಥಿತ ಚರ ಹಾಗೂ ಇನ್ನೀತರೆ ಆಸ್ತಿಗಳನ್ನು ದೇವಾಲಯದಿಂದ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದನ್ನು ಅನುಮೋದಿಸುವ ಬಗ್ಗೆ, ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ 5 ವರ್ಷಗಳ ಆದಾಯ ಮತ್ತು ಖರ್ಚಿನ ವಿವರ, ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಾಲಿ ಇರುವ ಭದ್ರತಾ ಸಿಬ್ಬಂದಿ ಮತು ದಾಸೋಹ ಸಿಬ್ಬಂದಿ, ಕಂಪ್ಯೂಟರ್ ಆಪರೇಟರ್ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಗೃಹರಕ್ಷಕ ದಳ ಸಿಬ್ಬಂದಿಯನ್ನು ನಿಯೋಜಿಸಿಕೊಂಡಿರುವ ಬಗ್ಗೆ, ಹುಲಿಗೆಮ್ಮದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಹಾಲಿ ಇರುವ ಸೇವಾರ್ಥ ದರಗಳ ಜೊತೆಗೆ ಹೊಸದಾಗಿ ಸೇವೆಗಳನ್ನು ಸೇರ್ಪಡೆಗೊಳಿಸುವ ಬಗ್ಗೆ, ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನ್ಯಾಯಾಲಯದ ಪ್ರಕರಣಗಳು ಸೇರಿದಂತೆ ಒಟ್ಟು 28 ವಿಷಯ ಬಗ್ಗೆ ಸಚಿವರು ಸಮಗ್ರ ಚರ್ಚಿಸಿದರು.

**ಪ್ರಮುಖ ನಿರ್ಣಯಗಳು:** ತಯಾರಿಸಿದ ಮಾಸ್ಟರ್ ಪ್ಲಾನ್ ಪರಿಶೀಲಿಸಿ ಹಾಲಿ ದೇವಾಲಯಕ್ಕೆ ಸೇರಿದ 49 ಎಕರೆ ಜಾಗದಲ್ಲಿ ಸುಸಜ್ಜಿತ ಪಾರ್ಕಿಂಗ್, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಕಲ್ಪಿಸಲು ದೇವಾಲಯದ ಹತ್ತಿರ ಇರುವ ನಾಲೆಯನ್ನು ಶುಚಿತ್ವದ ದೃಷ್ಟಿಯಿಂದ ಭೂಸ್ವಾಧೀನಪಡಿಸಿಕೊಂಡಿರುವ ಜಾಗಕ್ಕೆ ಸ್ಥಳಾಂತರ ಮಾಡಲು ತೀರ್ಮಾನಿಸಲಾಯಿತು. ವಿಶೇಷ ದಿನಗಳಲ್ಲಿ ಬರುವ ಭಕ್ತಾದಿಗಳಿಗೆ ಇನ್ನ ಹೆಚ್ಚಿನ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಹೆಚ್ಚುವರಿಯಾಗಿ 100 ಎಕರೆ ಜಮೀನನ್ನು ಹಂತಹಂತವಾಗಿ ಭೂಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಮುಂದೆ ಇಟ್ಟು ಇಲ್ಲಿ ಪರಾಮರ್ಶಿಸಿ ಸೂಕ್ತ ಬದಲಾವಣೆಗಳನ್ನು ಮಾಡಿ ಅಂತಿಮಗೊಳಿಸಿ ಸಲ್ಲಿಸಲು ತೀರ್ಮಾನಿಸಲಾಯಿತು. ದೇವಾಲಯದ ಪುನರ್ ನಿರ್ಮಾಣದ ಬಗ್ಗೆ ಜಿಲ್ಲಾಮಟ್ಟದಲ್ಲಿ ಚರ್ಚಿಸಿ ಇದನ್ನು ಮತ್ತೊಮ್ಮೆ ವಾಸ್ತುಶಿಲ್ಪ ಸಮಿತಿ ಮುಂದೆ ಇಟ್ಟು ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಯಿತು. ಪ್ರತಿಯೊಂದು ಕಾಮಗಾರಿಯನ್ನು ಮಾಸ್ಟರ್ ಪ್ಲಾನ್ ಒಳಗೆ ಅಳವಡಿಸಿಕೈಗೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು. ಅಂಗಡಿ ಮಳಿಗೆಗಳನ್ನು ಶೇ.20 ಬಾಡಿಗೆ ಹೆಚ್ಚಿಸಿ ಒಂದು ಬಾರಿಗೆ ಹಾಗೂ ಮುಂದಿನ ವರ್ಷ ಟೆಂಡರ್ ಮಾಡಲು ಹಾಗೂ ಯಾವುದೇ ಉಪಗುತ್ತಿಗೆ ಇರಬಾರದು ಎಂದು ಸಭೆಯಲ್ಲಿ ಸೂಚಿಸಲಾಯಿತು. 30 ಅಡಿ ಬೈಪಾಸ್ ರಸ್ತೆ ನಿರ್ಮಿಸಲು ಅಗತ್ಯವಿರುವ ವಿ:1–02 ಎಕರೆ ಮತ್ತು ದೇವಾಲಯದ ಅಭಿವೃದ್ಧಿಗೆ ಅಗತ್ಯವಿರುವ ಜಮೀನು ಖರೀದಿಸಲು ಪರಸ್ಪರ ಒಪ್ಪಂದಂತೆ ಖರೀದಿಸಲು, ಭೂಸ್ವಾಧೀನ ನಿಯಮದಡಿಯಲ್ಲಿ ಭೂಸ್ವಾಧೀನ ಮಾಡಲು ತೀರ್ಮಾನಿಸಲಾಯಿತು. ಖಾಲಿ ಇರುವ ಹುದ್ದೆಗಳಿಗೆ ನಿಯಮಾನುಸಾರ ಅರ್ಜಿ ಕರೆದು ಸಮಿತಿಯಲ್ಲಿ ಪರಿಶೀಲಿಸಿ ಪ್ರಾಧಿಕಾರದ ಮುಂದೆ ಮಂಡಿಸಬೇಕು ಎಂದರು.

ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಹೇಮಲತಾ ನಾಯಕ, ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಾದ ಎಂ.ವೆಂಕಟೇಶ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಪಾಂಡೆಯ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಇತರರಿದ್ದರು.

## ಪ್ರಧಾನಮಂತ್ರಿ ಜನಜಾತಿ ಉನ್ನತ ಗ್ರಾಮ ಅಭಿಯಾನ

# ಜಿಲ್ಲೆಯ 59 ಗ್ರಾಮಗಳು ಆಯ್ಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಧಾನಮಂತ್ರಿ ಜನಜಾತಿಯ ಉನ್ನತ ಗ್ರಾಮ ಅಭಿಯಾನ ಯೋಜನೆಯಡಿ ಅಭಿವೃದ್ಧಿಪಡಿಸಲು ಪಂಗಡ ಜನಾಂಗದವರು ಹೆಚ್ಚಾಗಿರುವ ಬಳ್ಳಾರಿ ಜಿಲ್ಲೆಯ 5 ವಲಯಗಳಿಂದ (ತಾಲ್ಲೂಕುಗಳಿಂದ) ಒಟ್ಟು 59 ಗ್ರಾಮಗಳನ್ನು ಆಯ್ಕೆಮಾಡಿದ್ದು, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೀಸಲಿರುವ 79,156 ಕೋಟಿ ರೂ.ಗಳಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ದೇಶದ 63,000 ಗ್ರಾಮಗಳಲ್ಲಿ ಅಭಿವೃದ್ಧಿಪಡಿಸಲು ಕ್ರಿಯಾಯೋಜನೆ ರೂಪಿಸಲಾಗಿದೆ. ಕೇಂದ್ರ ಬುಡಕಟ್ಟು ಮಂತ್ರಾಲಯ ಈ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊತ್ತಿದೆ. ದೇಶದ ಸುಮಾರು 8 ಕೋಟಿ ಜನರಿಗೆ ಯೋಜನೆಯಿಂದ ಅನುಕೂಲವಾಗಲಿದೆ ಎಂದು ಡಿಸಿಯವರು ತಿಳಿಸಿದ್ದಾರೆ.

2024–25 ರಿಂದ 2028–29ನೇ ಸಾಲಿನವರೆಗೆ 5 ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು. 2024–25 ರಿಂದ 2025–26ನೇ ಸಾಲಿಗೆ ಮೊದಲ ಹಂತದಲ್ಲಿ 4000 ಕೋಟಿ ಅನುದಾನವನ್ನು ಪ್ರಧಾನಮಂತ್ರಿ ಜನಜಾತಿ ಉನ್ನತ ಗ್ರಾಮ ಅಭಿಯಾನದಡಿ 17 ಇಲಾಖೆಗಳ ಸಹಯೋಗದಲ್ಲಿ ಜಿಲ್ಲೆಯ 59 ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಿಯಾಯೋಜನೆ ಸಿದ್ದಪಡಿಸಲಾಗಿದೆ. ಈ ಯೋಜನೆಗೆ ಒಳಪಟ್ಟ 59 ಗ್ರಾಮದ ಜನರು ಯೋಜನೆಯ ಸದುಪಯೋ ಗಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

# ಕೃಷಿ ಯಂತ್ರೋಪಕರಣಗಳ ಯೋಜನೆಯಡಿ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಸಂಸ್ಕರಣ ಘಟಕಗಳಿಗೆ ಬಳ್ಳಾರಿ ಹಾಗೂ ಕುರುಗೋಡು ತಾಲ್ಲೂಕು ವ್ಯಾಪ್ತಿಗೆ ಬರುವ ರೈತರಿಗೆ ಸಾಮಾನ್ಯ ವರ್ಗದಡಿ ಶೇ.50 ರಷ್ಟು ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಸೂಕ್ಷ್ಮ ನೀರಾವರಿ ಯೋಜನೆಯಡಿ ತುಂತುರು ನೀರಾವರಿ ಘಟಕಗಳಿಗೆ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ ನೀಡಲಾಗುತ್ತದೆ.

ಆಸಕ್ತ ರೈತರು ಅರ್ಜಿಗಳನ್ನು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ ಸಲ್ಲಿಸುವ ಮೂಲಕ ನೋಂದಾಯಿಸಿಕೊಳ್ಳಬಹುದು.

ರೈತರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತಿಯಾದಲ್ಲಿ ನಿಯಮಾನುಸಾರ ಜೇಷ್ಠತೆ ಅನ್ವಯ ಅರ್ಜಿಗಳನ್ನು ಪರಿಗಣಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಿ.

# ಪ್ರದರ್ಶನಕ್ಕಾಗಿ ಪ್ರಥಮ ಮುದ್ರಣಗೊಂಡ ಪುಸ್ತಕಗಳ ಆಯ್ಕೆ: ಆಕ್ಷೇಪಣೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಮಟ್ಟದ ಆಯ್ಕೆ ಸಮಿತಿಯು 2021ರಲ್ಲಿ ಪ್ರಥಮ ಮುದ್ರಣಗೊಂಡ ಪುಸ್ತಕಗಳ ಪ್ರದರ್ಶನಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಲಾಗಿದ್ದು, ಆಕ್ಷೇಪಣೆಗೆ ಆಹ್ವಾನಿಸಲಾಗಿದೆ.

ಆಯ್ಕೆಯಾದ ಪುಸ್ತಕಗಳ ತಾತ್ಕಾಲಿಕ ಪಟ್ಟಿಯನ್ನು ಜಿಲ್ಲಾ ನಗರ ಕೇಂದ್ರ ಗ್ರಂಥಾಲಯಗಳ ಕಚೇರಿಗಳಲ್ಲಿ ಹಾಗೂ ಇಲಾಖೆಯ ಅಧಿಕೃತ ವೆಬ್ ಸೈಟ್ dpl.karnataka.gov.in ನಲ್ಲಿ ಅ. 4 ರಿಂದ ಅಕ್ಟೋಬರ್ 5ರ ವರೆಗೆ ಪ್ರಕಟಿಸಲಾಗುವುದು. ಆಕ್ಷೇಪಣೆಗಳಿದ್ದಲ್ಲಿ ಅ. 9ರ ಸಂಜೆ 5.30ರ ಲಿಖಿತ ರೂಪದಲ್ಲಿ ಮನವಿಯನ್ನು ಸಲ್ಲಿಸಬಹುದು ಎಂದು ಹೊಸಪೇಟೆ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳು ತಿಳಿಸಿದ್ದಾರೆ.

# ಗ್ರಾಮ ಲೆಕ್ಕಾಧಿಕಾರಿ ಪರೀಕ್ಷೆ ಬರೆದ ಅಭ್ಯರ್ಥಿಗಳು





■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ ಹಾಗು ಹಗರಿ ಬೊಮ್ಮನಹಳ್ಳಿಯಲ್ಲಿ ಪಿಯುಸಿ ವಿದ್ಯಾರ್ಹತೆ ಹೊಂದಿದ ಎಲ್ಲಾ ಅಭ್ಯರ್ಥಿಗಳು ಭಾನುವಾರ ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ ಪರೀಕ್ಷೆ ಬರೆದರು.

ಹೊಸಪೇಟೆಯಲ್ಲಿ ಶಂಕರ ಆನಂದಸಿಂಗ್ ಸರ್ಕಾರಿ ಪ್ರಥಮದರ್ಜೆ ಕಾಲೇಜು ಸೇರಿದಂತೆ 14, ಕೂಡ್ಲಿಗಿಯಲ್ಲಿ 03, ಹಾಗು ಹಗರಿ ಬೊಮ್ಮನಹಳ್ಳಿಯಲ್ಲಿ 05 ಕೇಂದ್ರಗಳು ಸೇರಿದಂತೆ ಒಟ್ಟು 22 ಕೇಂದ್ರಗಳಲ್ಲಿ 10,958 ಅಭ್ಯರ್ಥಿಗಳು ಬೆಳಿಗ್ಗೆ 10.30 ರಿಂದ 12.30 ರವರೆಗೆ 150 ಅಂಕಗಳಿಗೆ ಕನ್ನಡದಲ್ಲಿ ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ ಪರೀಕ್ಷೆ ಬರೆದರು. ಈ ಸಮಯದಲ್ಲಿ ಪೊಲೀಸ್ ಸಿಬ್ಬಂದಿಗಳು ಅಭ್ಯರ್ಥಿಗಳನ್ನು ತಪಾಸಣೆ ಮಾಡಿದರು.

> ವಿಜಯನಗರ ಜಿಲ್ಲೆಯಲ್ಲಿ 22 ಕೇಂದ್ರಗಳಲ್ಲಿ ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ 10,958 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಪರೀಕ್ಷೆ ಶಾಂತಿಯುತವಾಗಿ ನಡೆದಿದೆ.
>
> – **ನಾಗರಾಜ ಹವಾಲ್ದಾರ್,** ಪ್ರಭಾರಿ ಡಿಡಿಪಿಯು, ವಿಜಯನಗರ ಜಿಲ್ಲೆ.

# ಕಂಬಳಿ ಸರ್ವ ಸಮುದಾಯ ಬಳಸುವ ವಸ್ತು

## ಸಂಶೋಧಕ ಗೋಣಿಬಸಪ್ಪ ಹೇಳಿಕೆ । ಹಾಲುಮತ ಸಮಾಜ ಚಿಂತನಾ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಸಂಕ್ಲಾಪುರದ ಜಿ ಯರಿಸ್ವಾಮಿಯವರ ಸ್ವಗೃಹದಲ್ಲಿ ಹಾಲುಮತ ಸಾಂಸ್ಕೃತಿಕ ವೇದಿಕೆ ಹಾಗೂ ಕನಕ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಹಾಲುಮತ ಸಮಾಜ ಚಿಂತನ ಕಾರ್ಯಕ್ರಮ 6ನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿ.ವಿ.ಯ ಹಸ್ತಪ್ರತಿ ವಿಭಾಗದ ಸಂಶೋಧಕ ಗೋಣಿಬಸಪ್ಪ ಕಂಬಳಿ ಸಂಪ್ರದಾಯ ಆಚರಣೆ ಮತ್ತು ನಂಬಿಕೆ ಕುರಿತು ಮಾತನಾಡಿ, ಕಂಬಳಿ ಸರ್ವ ಸಮುದಾಯದವರುಬಳಸುವ ಆರಾಧಿಸುವ ಬಹು ಮೂಲ ವಸ್ತು.

ಅಷ್ಟೆ ಅಲ್ಲದೆ ಕಂಬಳಿಯನ್ನು ಮಂಗಳ ಕಾರ್ಯಗಳಲ್ಲಿ, ಮದುವೆ ಸಮಾರಂಭದಲ್ಲಿ ಪೂಜಿಸುತ್ತಾರೆಂದು ತಿಳಿಸಿದರು.

ಕನ್ನಡ ನಾಡು ನುಡಿ ಕಲೆ ಸಾಹಿತ್ಯ ಸಂಗೀತ ಕ್ಷೇತ್ರಗಳಲ್ಲಿ ದುಡಿದ ಹಾಲುಮತ ಸಮುದಾಯದ ಅನೇಕ ಮಹಾನೀಯರ ಜೀವನ ಚರಿತ್ರೆ ಅವರ ತತ್ವ ಸಿದ್ಧಾಂತಗಳು ವ್ಯಕ್ತಿಗಳಿಗೆ ತಲುಪಿಸಬೇಕೆಂಬುದು ಕಾರ್ಯಕ್ರಮದ ಸದುದ್ದೇಶವಾಗಿದೆ ಎಂದರು.



ಜಿ ಗೋಪಾಲಕೃಷ್ಣರವರು ಅಧ್ಯಕ್ಷತೆ ವಹಿಸಿ ಇಂಥಹ ಹಲವಾರು ಆಯೋಜನೆ ಸಮುದಾಯದ ಬಲವರ್ಧನೆಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಜಿ. ಎರಿಸ್ವಾಮಿ ನಿರೂಪಿಸಿದರು. ಬಿ. ಮಲ್ಲಿಕಾರ್ಜುನ ಸ್ವಾಗತಿಸಿದರು ಜಿ.ಲೇಪಾಕ್ಷಿ ವಂದಿಸಿದರು. ಈ ಸಂಧರ್ಭದಲ್ಲಿ ಎನ್.ಕೆ. ಹನುಮಂತಪ್ಪ ಮರಿ ಅಂಕ್ಲಪ್ಪ,ಟಿ ಲೇಪಾಕ್ಷಿ, ಟಿ ಮಂಜುನಾಥ, ನೂಲಿ ಮಲ್ಲಿಕಾರ್ಜುನ, ಟಿ ಜ್ಞಾನೇಶ, ರಂಗಪ್ಪ, ಕುಮಾರಗೌಡ, ಜಿ ಚೆನ್ನಪ್ಪ, ತಿಪ್ಪೆಸ್ವಾಮಿ ಶಿಕ್ಷಕರು, ಜಿ ಹುಲುಗಪ್ಪ ಇದ್ದರು.

**SSLC** ಈ ಬಾರಿ ಫಲಿತಾಂಶ ನಮ್ಮದೆ
ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ
Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com
www.hampitimes.com - Hampi Times Margadarshi
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

## ವಿಷಯ : ಕನ್ನಡ (ಪ್ರ.ಭಾ)

**ನಿಮ್ಮನ್ನು ನೀವು ಪರೀಕ್ಷಿಸಿಕೊಳ್ಳಿ.**

ಅ) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.

1. ವಿಜಾತಿಯ ಸಂಯುಕ್ತಾಕ್ಷರಕ್ಕೆ ಉದಾಹರಣೆ ಇದು.
ಎ) ಎಚ್ಚರ
ಬಿ) ಉಷ್ಣ
ಸಿ) ಕಣ್ಣಿಗೆ
ಡಿ) ಬಟ್ಟೆ

2. ಮದೋನ್ಮತ್ತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
ಎ) ಲೋಪ ಸಂಧಿ
ಬಿ) ಆದೇಶ ಸಂಧಿ
ಸಿ) ಆಗಮ ಸಂಧಿ
ಡಿ) ಗುಣಸಂಧಿ

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸಲಾಗುವ ಲೇಖನ ಚಿಹ್ನೆ.
ಎ) ಅಲ್ಪವಿರಾಮ
ಬಿ) ಪೂರ್ಣ ವಿರಾಮ
ಸಿ) ಪ್ರಶ್ನಾರ್ಥಕ
ಡಿ) ವಿವರಣಾತ್ಮಕ

4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ.
ಎ) ಮಿಶ್ರವಾಕ್ಯ
ಬಿ) ಸರಳ ವಾಕ್ಯ
ಸಿ) ಸಾಮಾನ್ಯವಾಕ್ಯ
ಡಿ) ಸಂಯೋಜಿತ ವಾಕ್ಯ

5. 'ಸಪ್ತಮಮೀ' ವಿಭಕ್ತಿಯ ಕಾರಾಕರ್ಥವಿದು.
ಎ) ಕರಣಾರ್ಥ
ಬಿ) ಅಧಿಕರಣ
ಸಿ) ಸಂಪ್ರದಾನ
ಡಿ)ಅಪಾದಾನ

6. ರಾಜೀವಸಖ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
ಎ) ತತ್ಪುರುಷ ಸಮಾಸ
ಬಿ) ಅಂಶಿ ಸಮಾಸ
ಸಿ) ಬಹುವ್ರೀಹಿ ಸಮಾಸ
ಡಿ) ಗಮಕಸಮಾಸ

7. ಸೊಗಸಾಗಿ' ಪದವು ಈ ಅವ್ಯಯಕ್ಕೆ ಸೇರಿದೆ.
ಎ) ಸಾಮಾನ್ಯಾರ್ಥಕಾವ್ಯಯ
ಬಿ) ಅನುಕರಣಾವ್ಯಯ
ಸಿ) ಕ್ರಿಯಾರ್ಥಕಾವ್ಯಯ
ಡಿ) ಅವಧಾರಣಾರ್ಥಕವ್ಯಯ

8. ದ್ವಿತೀಯಾ' ವಿಭಕ್ತಿಯ ಕಾರಕಾರ್ಥ
ಎ) ಅಧಿಕರಣ
ಬಿ) ಕರಣಾರ್ಥ
ಸಿ) ಕರ್ಮಾರ್ಥ
ಡಿ) ಸಂಬಂಧ

9. ವನೌಷದಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಎ) ಗುಣಸಂಧಿ
ಬಿ) ಸವರ್ಣ ದೀರ್ಘ ಸಂಧಿ
ಸಿ) ಜಸ್ತ್ವ ಸಂಧಿ
ಡಿ) ವೃದ್ಧಿ ಸಂಧಿ

10. ನೆಯ್ದ ವಸ್ತ್ರ' ಪದವು ಈ ಸಮಾಸಕ್ಕೆ ಸೇರಿದೆ.
ಎ) ಅಂಶಿ ಸಮಾಸ
ಬಿ) ಕ್ರಿಯಾ ಸಮಾಸ
ಸಿ) ಗಮಕಸಮಾಸ
ಡಿ) ತತ್ಪುರುಷ ಸಮಾಸ

11. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣ ಅಭಿಪ್ರಾಯದ ವಾಕ್ಯವಾಗಿದ್ದರೆ ಅದು.
ಎ) ಮಿಶ್ರವಾಕ್ಯ
ಬಿ) ಸಾಮಾನ್ಯವಾಕ್ಯ
ಸಿ) ಸ್ವತಂತ್ರ ವಾಕ್ಯ
ಡಿ) ಸಂಯೋಜಿತ ವಾಕ್ಯ

12. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
ಎ) ವಾಕ್ಯವೇಷ್ಟನ ಚಿಹ್ನೆ
ಬಿ) ಉದ್ಧರಣ ಚಿಹ್ನೆ
ಸಿ) ಆವರಣ ಚಿಹ್ನೆ
ಡಿ) ಭಾವ ಸೂಚಕ ಚಿಹ್ನೆ

13. ಅನುನಾಸಿಕ ಸಂಧಿಗೆ ಉದಾಹರಣೆ ಇದು.
ಎ) ದೇವೇಂದ್ರ
ಬಿ) ಮಳೆಗಾಲ
ಸಿ)ವಾ ಙ್ಮಯ
ಡಿ) ದಿಗಂತ

14. ಅಂಗೈ 'ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
ಎ) ತತ್ಪುರುಷ ಸಮಾಸ
ಬಿ) ಕ್ರಿಯಾ ಸಮಾಸ
ಸಿ) ದ್ವಿಗು ಸಮಾಸ
ಡಿ) ಅಂಶಿ ಸಮಾಸ

15. ಬೇಗನೆ' ಪದವು ಈ ಅವ್ಯಯಕ್ಕೆ ಸೇರಿದೆ.
ಎ) ಸಾಮಾನ್ಯರ್ಥ ಕಾವ್ಯಯ
ಬಿ) ಅನುಕರಣಾವ್ಯಯ
ಸಿ)ಕ್ರಿಯಾರ್ಥ ಕಾವ್ಯಯ
ಡಿ) ಭಾವ ಸೂಚಕಾವ್ಯಯ

16. ಸಾವಿತ್ರಿಯೊಳ್' ಈ ಪದದಲ್ಲಿರುವ ವಿಭಕ್ತಿ.
ಎ) ದ್ವಿತೀಯಾ
ಬಿ) ತೃತಿಯಾ
ಸಿ) ಪಂಚಮೀ
ಡಿ) ಸಪ್ತಮೀ

17. ಸಂಭಾವನಾರ್ಥಕ ಕ್ರಿಯಾ ಪದಕ್ಕೆ ಉದಾಹರಣೆಯಾದ ಪದವಿದು.
ಎ) ಮಾಡಲಿ
ಬಿ) ಮಾಡನು
ಸಿ) ಮಾಡಿದನು
ಡಿ) ಮಾಡಿಯಾನು

18. 'ಉನ್ಮಾದ' ಪದವು ಈ ಸಂದಿಗೆ ಉದಾಹರಣೆಯಾಗಿದೆ.
ಎ) ಆದೇಶ ಸಂಧಿ
ಬಿ) ಲೋಪ ಸಂಧಿ
ಸಿ) ಅನುನಾಸಿಕ ಸಂಧಿ
ಡಿ) ಜಸ್ತ್ವ ಸಂಧಿ

19. ಕೈಯಾನು' ಪದವು ಈ ಸಮಾಸಕ್ಕೆ ಸೇರಿದೆ.
ಎ) ಕ್ರಿಯಾ ಸಮಾಸ
ಬಿ) ತತ್ಪುರುಷ ಸಮಾಸ
ಸಿ) ಅಂಶಿ ಸಮಾಸ
ಡಿ) ದ್ವಿಗು ಸಮಾಸ

20. ಸಾಮಾನ್ಯಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು.
ಎ) ಧಗಧಗ
ಬಿ) ಸುಮ್ಮನೆ
ಸಿ) ಉಂಟು
ಡಿ) ಅಥವಾ

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055